

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ ಸಂಪುಟ : 14 ಸಂಚಿಕೆ : 4 ಪುಟ 8 ಸುತ್ತೂರು ಶ್ರೀಕ್ಷೇತ್ರ ಗುರುವಾರ, 23 ಜನವರಿ 2020


# ಹೊಸಬಾಳಿಗೆ ನಾಂದಿಯಾಡಿದ 177 ಜೋಡಿಗಳು




**ಸುತ್ತೂರು ಶ್ರೀಕ್ಷೇತ್ರ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಬುಧವಾರದ ಕಾರ್ಯಕ್ರಮಗಳು ಜರುಗಿದವು.**

ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಪರಮ ಪೂಜ್ಯರ, ಬಂಧು-ಬಾಂಧವರ ಸಮ್ಮುಖದಲ್ಲಿ ಒಟ್ಟು 177 ಜೋಡಿಗಳು ತಮ್ಮ ಹೊಸ ಜೀವನಕ್ಕೆ ಕಾಲಿರಿಸಿದ್ದಾರೆ. ಉಚಿತ ಸಾಮೂಹಿಕ ವಿವಾಹ ವನ್ನು ಶ್ರೀಗಳವರ ಆಶೀರ್ವಾದದಿಂದ 2009 ರಿಂದಲೂ ವಿಜೃಂಭಣೆಯಿಂದ ನಡೆಸಿಕೊಂಡು ಬರುತ್ತಿದ್ದು ಇದುವರೆವಿಗೂ 2789 ಜೋಡಿಗಳು ತಮ್ಮ ನೂತನ ಜೀವನವನ್ನು ಸುತ್ತೂರಿನ ಉಚಿತ ಸಾಮೂಹಿಕ ವಿವಾಹ ಎಂಬ ದೀಪದಲ್ಲಿ ಬೆಳಗಿಸಿಕೊಂಡಿದ್ದಾರೆ.

ಈ ಬಾರಿಯ ಸಾಮೂಹಿಕ ವಿವಾಹದಲ್ಲಿ ಪರಿಶಿಷ್ಟ ಜಾತಿಯ 106, ಹಿಂದುಳಿದ ವರ್ಗದ 33, ಅಂತರ್ಜಾತಿಯ 17, ವೀರಶೈವ ಲಿಂಗಾಯತರು 11 ಹಾಗೂ ಪರಿಶಿಷ್ಟ ಪಂಗಡದ 10 ಜೋಡಿಗಳು ಶ್ರೀಕ್ಷೇತ್ರದಲ್ಲಿ ಸಪ್ತಪದಿ ತುಳಿದರು.

**ಇಂದು ರಥೋತ್ಸವ**
**24 ಕೊಂಡೋತ್ಸವ ಲಕ್ಷದೀಪೋತ್ಸವ**
**25 ತೆಪ್ಪೋತ್ಸವ**

## ಸರಳ ಜೀವನ ನಡೆಸಿ

### ನೂತನ ವಧುವರರಿಗೆ ಡಾ. ಶ್ರೀ ಡಿ. ವೀರೇಂದ್ರ ಹೆಗ್ಗಡೆ ಕರೆ

ನೂತನ ದಂಪತಿಗಳು ದುಂದು ವೆಚ್ಚಗಳನ್ನು ಕಡಿಮೆ ಮಾಡಿ ವ್ಯಸನಗಳಿಂದ ಮುಕ್ತರಾಗಿ ಸರಳವಾಗಿ ಜೀವನ ನಡೆಸಬೇಕು ಎಂದು ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ರಾಜರ್ಷಿ ಡಾ. ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಕರೆ ನೀಡಿದರು.

ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಶುಭ ಸಂದೇಶ ನೀಡಿದ ಅವರು ಹಿಂದಿನ ಕಾಲದಲ್ಲಿ ಒಂದು ಕುಟುಂಬದಲ್ಲಿ ಅನೇಕ ಮಕ್ಕಳು ಇರುತ್ತಿದ್ದರು. ಅವರ ಎಲ್ಲಾ ಮದುವೆ ಜವಾಬ್ದಾರಿ ಮನೆಯ ಯಜಮಾನರದ್ದೇ ಅಗಿರುತ್ತಿತ್ತು, ಹಿಂದಿನ ಕಾಲದಲ್ಲಿ ಮದುವೆಗೆ ಪಾವಿತ್ರ್ಯತೆ ಮುಖ್ಯವಾಗಿರುತ್ತಿತ್ತು. ಶ್ರೀನಿವಾಸ ಕಲ್ಯಾಣಕ್ಕೆ ಅನೇಕ ದೇವತೆಗಳು ಹಾಗೂ ಋಷಿಮುನಿಗಳು ಬರುತ್ತಿದ್ದರು, ಅದೇ ರೀತಿಯಾಗಿ ಇಂದು ಸುತ್ತೂರಿನಲ್ಲಿ ನಡೆಯುತ್ತಿರುವ ನಿಮ್ಮ ಮದುವೆಗೆ ಶರಣರು ರಾಜಕೀಯ ಗಣ್ಯರು ಹಾಗೂ ಭಕ್ತಾದಿಗಳು ನೆರೆದಿದ್ದಾರೆ. 7ನೇ ಪುಟಕ್ಕೆ




## 'ಶ್ರೀಮಠ ಸಮಾಜಮುಖಿ'

ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಧಾರ್ಮಿಕ ಕ್ಷೇತ್ರದ ನೇತಾರರು. ಅವರ ಹೆಸರಿನಲ್ಲಿ ಜಾತ್ರಾ ಮಹೋತ್ಸವವನ್ನು ಪ್ರತಿವರ್ಷವು ಬಹಳ ವೈಭವಯುತವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಈ ಸಂದರ್ಭದಲ್ಲಿ ಭಾಗವಹಿಸಿ ನವ ವಧುವರರನ್ನು ಆಶೀರ್ವದಿಸುತ್ತಿರುವುದು ನನಗೆ ಸಂತೋಷ ತಂದಿದೆ ಎಂದು ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್. ಡಿ. ದೇವೇಗೌಡರವರು ನುಡಿದರು.



ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ನನಗೂ ಶ್ರೀಮಠಕ್ಕೂ ಸುಮಾರು ಐವತ್ತು ವರ್ಷಗಳ ನಿಕಟ ಸಂಬಂಧವಿದೆ. ಶ್ರೀಮಠವು ಅನ್ನದಾಸೋಹ 7ನೇ ಪುಟಕ್ಕೆ

## ಆಧುನಿಕ ಅನುಭವ ಮಂಟಪ



ಅಂದು ಜನರ ಕಷ್ಟಗಳನ್ನು ದೂರಗೊಳಿಸಲು ಸ್ಥಾಪಿಸಿದ ಅನುಭವ ಮಂಟಪದಂತೆ ಇಂದು ಸುತ್ತೂರು ಶ್ರೀಮಠವು ಜನರಿಗೆ ಉಚಿತ ಶಿಕ್ಷಣ ಹಾಗೂ ಆರೋಗ್ಯ ಚಿಕಿತ್ಸೆಯನ್ನು ಒದಗಿಸುತ್ತಿದೆ ಎಂದು ಶಾಸಕರು ಹಾಗೂ ಮಾಜಿ ಸಚಿವರಾದ ಎಂ.ಬಿ. ಪಾಟೀಲ್‌ರವರು ಹೇಳಿದರು.

ಭಜನಾ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಹಿಂದಿನ ಪರಂಪರೆಯಂತೆ ಜಾತ್ರೆಯನ್ನು ಮಾಡಿಕೊಂಡು ಬಂದಿರುವ ಮಠಗಳು ಹಿರಿಯರು, ಮಠಾಧೀಶರು, ರಾಜಕಾರಣಿಗಳು ಜನ ಸಾಮಾನ್ಯರು ಎಲ್ಲರನ್ನು ಒಗ್ಗೂಡಿಸಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಮನೋರಂಜನ ಕಾರ್ಯಕ್ರಮಗಳಲ್ಲಿ ಜಾತಿ ಮತಗಳ ಭೇದವಿಲ್ಲದೆ ಸಂಭ್ರಮದಿಂದ ಮನೆಮನೆಯ ಹಬ್ಬದಂತೆ ಆಚರಿಸಿಕೊಂಡು ಬರಲಾಗುತ್ತಿದೆ. ಸಂಗೀತ, ಜಾನಪದ, ನೃತ್ಯ, ಭಜನೆ, ಕೃಷಿ, ಕ್ರೀಡೆ ಪ್ರತಿಯೊಂದರ ಸ್ವಾರಸ್ಯವನ್ನು ಜನರಿಗೆ ಉಣಬಡಿಸುತ್ತಿವೆ. ವಿಜಯಪುರದ ಸಿದ್ದೇಶ್ವರಸ್ವಾಮಿಗಳ ಹಾಗೂ ಸುತ್ತೂರಿನ ಶ್ರೀಗಳ ಮೇಲೆ ನನಗೆ ಅಪಾರವಾದ ಭಕ್ತಿ ಹಾಗೂ ಗೌರವವಿದೆ ಎಂದು ಹೇಳಿದರು. - ಅನುಷ.ಪಿ

## ಸಹಬಾಳ್ವೆ ಸಾರುವ ಭಜನಾ ಕಲೆ



ಶ್ರೀ ಬಿ.ಹರ್ಷವರ್ಧನ್

ಪ್ರಾಚೀನ ಕಾಲದಿಂದಲೂ ಗ್ರಾಮೀಣ ಪ್ರದೇಶದ ಜನರು ಹಾಡುತ್ತಾ ಬಂದಿರುವ ಭಜನೆಯಲ್ಲಿ ಮಾನವರಾದ ನಾವೆಲ್ಲ ಒಂದೇ ಎಂಬ ತತ್ವ ಅಡಗಿದೆ, ಸಹಬಾಳ್ವೆ, ಸ್ನೇಹ-ಸೌಹಾರ್ದತೆಯ ಪ್ರತೀಕವಾಗಿ ಭಜನಾ ಕಲೆ ಹಿಂದಿನಿಂದಲು ಸಾಗುತ್ತಾ ಬಂದಿದೆ ಎಂದು ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಬಿ. ಹರ್ಷವರ್ಧನ್‌ರವರು ಹೇಳಿದರು.

ಭಜನಾ ಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಹಿಂದೆ ಗ್ರಾಮೀಣ ಪ್ರದೇಶಗಳಲ್ಲಿ ಜನರು ತಮ್ಮ ಕಷ್ಟ ಸುಖಗಳನ್ನು ಮಾತನಾಡಿಕೊಳ್ಳಲು ಒಂದೆಡೆ 2ನೇ ಪುಟಕ್ಕೆ



ಡಾ. ಶ್ರೀ ಡಿ. ವೀರೇಂದ್ರಹೆಗ್ಗಡೆಯವರು ಮಹಾದಾಸೋಹದ ಪ್ರಸಾದ ವೀಕ್ಷಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಚನ್ನಬಸವ ಸ್ವಾಮಿಗಳು, ಶ್ರೀ ಜಯರಾಜೇಂದ್ರ, ಶ್ರೀ ಮುಕುಂದ್, ಶ್ರೀ ನಿರಂಜನಮೂರ್ತಿ ಮೊದಲಾದವರಿದ್ದಾರೆ.


# ಸಹಬಾಳ್ವೆ ಸಾರುವ ಭಜನಾ ಕಲೆ

ಸೇರಿಕೊಳ್ಳುತ್ತಿದ್ದರು ಆಗ ಭಜನೆಗಳನ್ನು ಹಾಡಿಕೊಳ್ಳುತ್ತಾ ದುಡಿದು ಬಂದ ತಮ್ಮ ದಣಿವನ್ನು ನಿವಾರಿಸಿಕೊಂಡು ಮನಸ್ಸಿಗೆ ನೆಮ್ಮದಿ ತಂದುಕೊಳ್ಳುತ್ತಿದ್ದರು. ಅಸ್ಪೃಶ್ಯತೆ, ಅಸಮಾನತೆ, ಬಡತನ ಈಗಲೂ ಇದೆ. ಈ ಅನಿಷ್ಟಗಳನ್ನು ಹೋಗಲಾಡಿಸಬೇಕು ಎಂದು ಹೇಳಿದ ಅವರು ಎಪ್ಪತ್ತರ ದಶಕದಲ್ಲಿ ನಮ್ಮ ತಾತನವರಾದ ಬಿ. ಬಸವಲಿಂಗಪ್ಪನವರು ಸಚಿವರಾಗಿದ್ದಾಗ ಮಲಹೊರುವ ಪದ್ಧತಿಯನ್ನು ನಿಷೇಧಿಸಿದ್ದರು. ಅವರ ಈ ಕಾರ್ಯವನ್ನು ಅಂದಿನ ಪ್ರಧಾನಮಂತ್ರಿಗಳಾಗಿದ್ದ ಇಂದಿರಾಗಾಂಧಿಯವರು ಶ್ಲಾಘಿಸಿದ್ದರು. ಒಳ್ಳೆಯ ಕೆಲಸಗಳನ್ನು ಮಾಡಲು ರಾಜಕಾರಣಿಗಳಿಗೆ ಇಚ್ಛಾಶಕ್ತಿ ಇರಬೇಕು ಎಂದು ಹೇಳಿದರು. **–ಅನನ್ಯ.ಜಿ.ಎಸ್**

# ‘ಮನಸ್ಸು ಪವಿತ್ರವಾಗಿದ್ದರೆ ಬದುಕು ಹಸನು’



ಸಾಮೂಹಿಕ ವಿವಾಹ ಕಾರ್ಯಕ್ರಮದ ಸಮ್ಮುಖ ವಹಿಸಿದ್ದ ಕನಕಪುರದ ಶ್ರೀ ದೇಗುಲ ಮಠದ ನಿ.ಪ್ರ.ಸ್ವ. ಡಾ. ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳವರು ಶುಭಸಂದೇಶವನ್ನು ನೀಡುತ್ತಾ, ಇಂದು ಜನರು ಸಾಲಮಾಡಿಯಾದರು ತುಪ್ಪ ತಿನ್ನು ಎಂಬಂತೆ ಸಾಲವಾಡಿ ವಿಜೃಂಭಣೆಯಿಂದ ಮದುವೆ ಮಾಡಿ ಸಾಲದ ಶೂಲಕ್ಕೆ ಬಲಿಯಾಗುತ್ತಿದ್ದಾರೆ. ಇಂತಹ ಸಂಕೀರ್ಣ ಪರಿಸ್ಥಿತಿ ಯಲ್ಲಿ ಸುತ್ತೂರು ಶ್ರೀಗಳವರು ಸಾಮೂಹಿಕ ವಿವಾಹಗಳನ್ನು ನಡೆಸುವ ಮೂಲಕ ಜನತೆಗೆ ಖರ್ಚಿನ ಭಾರವನ್ನು ಕಡಿಮೆ ಮಾಡುತ್ತಿದ್ದಾರೆ. ಆದುದರಿಂದ ನವದಂಪತಿಗಳ ಪೋಷಕರು ಧನ್ಯರಾಗಿದ್ದಾರೆ. ಕಷ್ಟಬಂದಾಗ ಕುಗ್ಗದೆ ಸುಖಬಂದಾಗ ಹಿಗ್ಗದೆ ಸತಿ–ಪತಿ ಇಬ್ಬರು ಒಟ್ಟಾಗಿ ಬಾಳಬೇಕು. ಕುಟುಂಬವನ್ನು ಸರಿಯಾದ ದಾರಿಯಲ್ಲಿ ಸಾಗಿಸಿಕೊಂಡು ಹೋಗಬೇಕು, ಮದುವೆಂಬು ವುದು ಜೀವನದಲ್ಲಿ ಪ್ರಮುಖವಾದ ಘಟ್ಟ, ನವ ಜೀವನಕ್ಕೆ ಕಾಲಿಟ್ಟಿರುವ ದಂಪತಿಗಳು ಈ ಸಂದರ್ಭದಲ್ಲಿ ಪ್ರತಿಜ್ಞೆಮಾಡಿ ವ್ಯಸನಗಳಿಂದ ದೂರ ಉಳಿಯಬೇಕು ಹಾಗೂ ಜೀವನದಲ್ಲಿ ತಮ್ಮ ಕರ್ತವ್ಯವನ್ನು ಅರಿತು ಬಾಳಿದರೆ ಜೀವನ ಸಾರ್ಥಕವಾಗುವುದು, ಪೂಜ್ಯರು, ಗಣ್ಯರ ಸಮ್ಮುಖದಲ್ಲಿ ಆಶೀರ್ವಾದ ಪಡೆದು ಹೊಸ ಜೀವನಕ್ಕೆ ಕಾಲಿಟ್ಟಿರುವ ನಿಮ್ಮ ಜೀವನ ಸುಖವಾಗಿರಲಿ ಎಂದು ವಧುವರರನ್ನು ಆಶೀರ್ವಾದಿಸಿದರು. **–ಮಂದಾರ ಮತ್ತು ಆದರ್ಶ್**



‘ಸುತ್ತೂರು ವಾರ್ತೆ’ಯನ್ನು ಆಸಕ್ತಿಯಿಂದ ಗಮನಿಸುತ್ತಿರುವ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು

# ಮಾನವತ್ವದಿಂದ ದೈವತ್ವದ ಕಡೆಗೆ



ರಾಜ್ಯಮಟ್ಟದ ಭಜನಾಮೇಳ ಉದ್ಘಾಟನಾ ಕಾರ್ಯಕ್ರಮದ ಸಮ್ಮುಖವಹಿಸಿದ್ದ, ತಿಪಟೂರು ಶ್ರೀ ಕೆರಗೋಡಿ–ರಂಗಾಪುರ ಸುಕ್ಷೇತ್ರದ ಶ್ರೀ ಗುರುಪರದೇಶಿಕೇಂದ್ರ ಮಹಾಸ್ವಾಮಿಗಳು ಶುಭ ಸಂದೇಶ ನೀಡಿದರು. ಸುತ್ತೂರು ಶ್ರೀಮಠದ ಸೇವಾಕಾರ್ಯ, ರಾಜ್ಯ, ದೇಶ–ವಿದೇಶಗಳಿಗೂ ವಿಸ್ತರಿಸಿರುವುದನ್ನು ನೋಡಿದರೆ, ಜಗದ್ಗುರುಗಳ ಸೇವೆಯನ್ನು ಎಲ್ಲರೂ ಮೆಚ್ಚುವಂತಹದ್ದು. ಶಿಕ್ಷಣ, ಕಾಯಕ, ದಾಸೋಹ, ಆರೋಗ್ಯಕ್ಕೆ ಶ್ರೀಕ್ಷೇತ್ರ ನೀಡಿರುವ ಕೊಡುಗೆ ಅಪಾರವಾದದ್ದು, ಭಜನೆಯನ್ನು ಪ್ರತಿಯೊಬ್ಬರು ಕೂಡಿ ಹಾಡಬೇಕು. ಮನಸ್ಸಿಗೆ ಒಳ್ಳೆಯ ಚಿಂತನೆಗಳನ್ನು ನೀಡುವುದರ ಜೊತೆಗೆ ವಿಕಾಸಹೊಂದಲು ಭಜನೆ ಸಹಾಯಕವಾಗಿದೆ.

ಬಸವಾದಿ ಶರಣರ ವಚನಗಳು, ಸಾಧು–ಸಂತರ ಚಿಂತನೆಗಳನ್ನು ಭಜನೆಯ ಮೂಲಕ ಹಾಡುವುದರಿಂದ ಮಾನವತ್ವದಿಂದ ದೈವತ್ವದ ಕಡೆಗೆ ನಾವೆಲ್ಲರೂ ಹೋಗುತ್ತೇವೆ. ಮನಸ್ಸಿನ ಅಂಕುಡೊಂಕುಗಳನ್ನು ತಿದ್ದಲು ಭಜನೆ ಸಹಕಾರಿಯಾಗಿದೆ. ಮನುಷ್ಯ ಸದಾ ಒಳ್ಳೆಯವನಾಗುವುದರಿಂದ ಅವನು ದೈವತ್ವದ ಕಡೆಗೆ ಹೋಗುತ್ತಾನೆ. ಇಂದಿನ ಯುವಕರು ಭಜನೆಗಳನ್ನು ಹಾಡಲು ಮನಸ್ಸು ಮಾಡುತ್ತಿಲ್ಲ. ಇಂತಹ ಜಾತ್ರೆಗೆ ಭಾಗವಹಿಸುವುದರಿಂದ ಭಜನೆ ಕಲಿಯುವ ಮನಸ್ಸು ಬರುತ್ತದೆ. ದೇಶದ ಸಂಸ್ಕೃತಿ ಗಳನ್ನು ಸುತ್ತೂರು ಶ್ರೀಮಠ ಉಳಿಸಿ ಬೆಳೆಸಿಕೊಂಡು ಬರುತ್ತಿದೆ ಎಂದರು. **– ಮದನ್.ಕೆ.ಪಿ**

# ಪರಂಪರೆಯ ಕೈಗನ್ನಡಿ



ಸುತ್ತೂರು ಜಾತ್ರಾ ಮಹೋತ್ಸವದ ರಾಜ್ಯ ಮಟ್ಟದ 28ನೇ ಭಜನಾಮೇಳದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಸಚಿವೆ ಡಾ. ಗೀತಾ ಮಹಾದೇವ ಪ್ರಸಾದ್‌ರವರು ಭಜನಾ ಮೇಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಂಡಗಳು ಭಾಗವಹಿಸುತ್ತಿರುವುದು ಶ್ರೀಮಠದ ಪರಂಪರೆಗೆ ಕೈಗನ್ನಡಿಯಾಗಿದೆ. ಆಡುಮುಟ್ಟದ ಸೊಪ್ಪಿಲ್ಲ ಎಂಬಂತೆ ಜೆಎಸ್‌ಎಸ್ ಸಂಸ್ಥೆಯು ಎಲ್ಲಾ ಕ್ಷೇತ್ರದಲ್ಲೂ ತನ್ನ ಸೇವೆಯನ್ನು ಮುಂದುವರಿಸಿ ದೇಶ ವಿದೇಶದಲ್ಲೂ ತಮ್ಮ ಕೀರ್ತಿಪತಾಕೆಯನ್ನು ಹಾರಿಸಿದೆ ಎಂದು ಪ್ರಶಂಶಿಸಿದರು.



ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ, ಶ್ರೀ ಎಂ.ಬಿ. ಪಾಟೀಲ್, ಡಾ. ಎಚ್.ಸಿ. ಮಹದೇವಪ್ಪ, ಕೆಪಿಎಸ್‌ಸಿ ಅಧ್ಯಕ್ಷರಾದ ಶ್ರೀ ಎಸ್.ಪಿ. ಷಡಕ್ಷರಸ್ವಾಮಿ, ಶ್ರೀ ಎಸ್.ಪಿ. ಉದಯಶಂಕರ್ ಹಾಗೂ ಕುಟುಂಬ ವರ್ಗದವರಿದ್ದಾರೆ.

# ದುಡಿಮೆಯಿಂದ ಬದುಕನ್ನು ಕಟ್ಟಿಕೊಳ್ಳಿ

ಸುತ್ತೂರು ಗ್ರಾಮದಲ್ಲಿ ಮಂಗಳವಾರ ಮುಂಜಾನೆ ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನಾ ಪಥಸಂಚಲನ ಕಾರ್ಯಕ್ರಮ ನಡೆಯಿತು. ಊರಿನ ಪ್ರಮುಖ ಬೀದಿಗಳಲ್ಲಿ ವಾದ್ಯಮೇಳ, ಬ್ಯಾಂಡ್ ಸೆಟ್, ಭಜನೆ ಮತ್ತು ಶಾಲಾ ಮಕ್ಕಳ ಪಥಸಂಚಲನದೊಂದಿಗೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಉತ್ಸವ ಮೂರ್ತಿಗೆ ಭಕ್ತಾದಿಗಳು ಪೂಜೆ ಸಲ್ಲಿಸಿದರು. ಮೈಸೂರಿನ ಶ್ರೀ ಹೊಸಮಠದ ನಿ.ಪ್ರ.ಸ್ವ. ಶ್ರೀ ಚಿದಾನಂದಸ್ವಾಮಿಗಳು ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸಿದರು.

ಕಲಬುರುಗಿ ಜಿಲ್ಲೆಯ ಸೂಗೂರು ಶ್ರೀ ರುದ್ರಮುನೀಶ್ವರ ಮಠದ ಷ.ಬ್ರ.ಶ್ರೀ ಚನ್ನರುದ್ರಮುನಿ ಶಿವಾಚಾರ್ಯಸ್ವಾಮಿಗಳು ಧರ್ಮ ಸಂದೇಶ ನೀಡುತ್ತಾ, ಜಾತ್ರೆಗಳು ಎಲ್ಲ ಕಡೆ ನಡೆಯುತ್ತವೆ, ಆದರೆ ಸುತ್ತೂರು ಜಾತ್ರೆಯು ಎಲ್ಲಾ ಜಾತ್ರೆಗಳಿಗೆ ಮಾದರಿಯಾಗಿ ವಿಶೇಷವಾಗಿದೆ. ಈ ಜಾತ್ರೆಯಲ್ಲಿ ಭಜನೆ, ಕೃಷಿ ಮೇಳ, ವೈಚಾರಿಕತೆ ಸೇರಿದಂತೆ ವಿವಿಧ ವಿಷಯಗಳನ್ನು ನಾವು ತಿಳಿಯಬಹುದು. ಸುತ್ತೂರು ಜಗದ್ಗುರುಗಳು ಸಮಾಜಕ್ಕೆ ಅನೇಕ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಶಾಲೆಯಲ್ಲಿ ಮಕ್ಕಳಿಗೆ ನಾವು ಎ–ಆ್ಯಪಲ್, ಬಿ–ಬಾಲ್, ಸಿ–ಕ್ಯಾಟ್, ಡಿ–ಡಾಗ್ ಈ ರೀತಿಯಾಗಿ ಕಲಿಸುತ್ತೇವೆ ಆದರೆ ಸುತ್ತೂರಿನಲ್ಲಿ ಶಾಲಾ ಮಕ್ಕಳಿಗೆ ಎ–ಅಲ್ಲಮ, ಬಿ–ಬಸವಣ್ಣ, ಸಿ–ಚೆನ್ನಮಲ್ಲಿಕಾರ್ಜುನ ಎಂಬ ಶರಣರ ವಿಚಾರಧಾರೆಗಳನ್ನು ಹೇಳಿಕೊಡುತ್ತಿದ್ದಾರೆ. ರೈತರಿಗಾಗಿ ಜಗದ್ಗುರುಗಳು ಕೃಷಿಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ಏರ್ಪಡಿಸಿದ್ದಾರೆ, ಏಕೆಂದರೆ ರೈತರು ತಮ್ಮ ಸ್ವಂತ ದುಡಿಮೆಯಿಂದ ಯಾರ ಸಹಾಯವಿಲ್ಲದೆ ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು. ಇಂದಿನ ಜನರು ತಾವಾಯಿತು, ತಮ್ಮ ಕೆಲಸವಾಯಿತು ಎಂದು ಇರುತ್ತಾರೆ. ಮಾನವ ಮನುಷ್ಯತ್ವ, ಕರುಣೆ, ಸಹಾಯ ಮಾಡುವ ಗುಣವನ್ನು ಬೆಳಸಿಕೊಳ್ಳಬೇಕೆಂದು ತಿಳಿಸಿದರು. ಇಂದು ಯಾವುದೇ ಕೆಲಸ ಮಾಡದೆ ಲಾಭ ಪಡೆಯಬೇಕೆಂದು ಜನ ಬಯಸುವರು, ಯಾರಲ್ಲಿಯೂ ದುಡಿಯುವ ಮನೋಭಾವನೆ ಇಲ್ಲ.

ಶ್ರೀಮಠದ ಜಾತ್ರೆಯಲ್ಲಿ ಎಲ್ಲರೂ ದುಡಿಮೆಯಿಂದ ಬದುಕಬೇಕೆಂಬ ತತ್ವ ನೋಡಿ ನನಗೆ ಸಂತೋಷವಾಯಿತು. ಗಾಂಧೀಜಿಯವರಿಗೆ ಶಾಂತಿ ಕಾಪಾಡುವ ಕನಸಿತ್ತು, ಅಲೆಗ್ಸಾಂಡರ್‌ಗೆ ಸಾಮ್ರಾಜ್ಯದ ಕನಸಿತ್ತು, ಮದರ್ ತೆರೆಸಾಗೆ ಅನಾಥ ಮಕ್ಕಳನ್ನು ಉಪಚರಿಸುವ ಕನಸಿತ್ತು, ಅಣ್ಣಾಹಜಾರೆಗೆ ಗ್ರಾಮೀಣ ಅಭಿವೃದ್ಧಿಯ ಕನಸಿತ್ತು. ಜಗದ್ಗುರುಗಳು ಜನರ ಮಂಗಳ ಕಾರ್ಯ ಮಾಡುವ ಕನಸು ಹೊಂದಿದ್ದಾರೆ ಎಂದ ಅವರು ಹೆಂಡತಿಗೆ ಕೊಡಬೇಡ ಲಗಾಮು, ಕೊಟ್ಟರೆ ನೀನಾಗುವೆ ಗುಲಾಮ ಅದಕ್ಕಾಗಿ ಮದುವೆಯಾಗಲಿಲ್ಲ ಅಬ್ದುಲ್‌ಕಲಾಂ, ಜಗದ್ಗುರು ಶ್ರೀ ಶಿವಾರಾತ್ರೀಶ್ವರ ಸ್ವಾಮಿಗಳಿಗೆ ನನ್ನದೊಂದು ಸಲಾಂ, ಸಲಾಂ ಎಂದು ಹೇಳಿದರು.– ತೇಜ



ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಚಿದಾನಂದ ಸ್ವಾಮಿಗಳು ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸಿದರು. ಶ್ರೀ ಚನ್ನರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಧರ್ಮಸಂದೇಶ ನೀಡುತ್ತಿರುವುದು.

## ಜಾತ್ರಾ ಮಹೋತ್ಸವ

### ಶ್ರೀ ಕ್ಷೇತ್ರದಲ್ಲಿಂದು

**ರಥೋತ್ಸವ** ಬೆಳಗ್ಗೆ 10.30

**ಧಾರ್ಮಿಕ ಸಭೆ** ಬೆಳಗ್ಗೆ 11.15

**ಸಮ್ಮುಖ:** ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು, ಶ್ರೀ ಜೈನ ಮಠ, ಶ್ರವಣಬೆಳಗೊಳ, ಶ್ರೀ 1008 ವಿದ್ಯಾಶ್ರೀಶ ತೀರ್ಥ ಶ್ರೀಪಾದರು, ಶ್ರೀ ವ್ಯಾಸರಾಜ ಮಠ, ಸೋಸಲೆ. **ರಥೋತ್ಸವಕ್ಕೆ ಚಾಲನೆ :** ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜವಂಶಸ್ಥರು, ಮೈಸೂರು. **ಅಧ್ಯಕ್ಷತೆ :** ಡಾ. ಸಿ.ಎನ್. ಅಶ್ವಥ್ ನಾರಾಯಣ್, ಉಪ ಮುಖ್ಯಮಂತ್ರಿಗಳು. **ಉದ್ಘಾಟನೆ :** ಶ್ರೀ ಡಿ.ವಿ. ಸದಾನಂದ ಗೌಡ, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು. **ಮುಖ್ಯ ಅತಿಥಿಗಳು :** ಶ್ರೀ ಎಂ.ಪಿ. ರೇಣುಕಾಚಾರ್ಯ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳು, ಶ್ರೀ ಬಿ.ಸಿ. ಪಾಟೀಲ್, ವಿಧಾನಸಭಾ ಸದಸ್ಯರು, ಹಿರೇಕೆರೂರು, ಶ್ರೀ ವೈ.ಎ. ನಾರಾಯಣಸ್ವಾಮಿ, ವಿಧಾನಪರಿಷತ್ ಸದಸ್ಯರು, ಬೆಂಗಳೂರು, ಶ್ರೀ ಆರ್. ಧ್ರುವನಾರಾಯಣ, ಮಾಜಿ ಲೋಕಸಭಾ ಸದಸ್ಯರು, ಶ್ರೀ ಈಶ್ವರನ್, ವಿಧಾನಸಭಾ ಸದಸ್ಯರು, ಭವಾನಿಸಾಗರ, ಈರೋಡ್ ಜಿಲ್ಲೆ, ಶ್ರೀಮತಿ ಸೌಮ್ಯ ರೆಡ್ಡಿ, ವಿಧಾನಸಭಾ ಸದಸ್ಯರು, ಜಯನಗರ. **ಉಪನ್ಯಾಸ :** ಶ್ರೀ ಮಹಮದ್ ಕುಂಞ ವ್ಯವಸ್ಥಾಪಕರು, ಶಾಂತಿ ಪ್ರಕಾಶನ, ಮಂಗಳೂರು, ಡಾ. ಬಿ.ವಿ. ವಸಂತಕುಮಾರ್, ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ರೆ.ಫಾ. ಸ್ಟ್ಯಾನ್ಲಿ ಡಿ' ಅಲ್ಮೆಡಾ, ಪ್ರಧಾನ ಧರ್ಮಗುರುಗಳು, ಸಂತ ಜೋಸೆಫರ ದೇವಾಲಯ, ಮೈಸೂರು

**ಐವತ್ತೆರಡನೆಯ ದನಗಳ ಜಾತ್ರೆ : ಉದ್ಘಾಟನೆ** ಸಂಜೆ 4.00


**ಸಮ್ಮುಖ :** ಷ.ಬ್ರ.ಡಾ. ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗವಿಮಠ, ಕಣ್ವಕುಪ್ಪೆ, ದಾವಣಗೆರೆ ಜಿಲ್ಲೆ, ಶ್ರೀ ಜ್ಞಾನಪ್ರಕಾಶ ಸ್ವಾಮಿಗಳು, ಶ್ರೀ ಉರಿಲಿಂಗಪೆದ್ದಿ ಮಠ, ಮೈಸೂರು. **ಅಧ್ಯಕ್ಷತೆ :** ಶ್ರೀ ಸಿ.ಸಿ. ಪಾಟೀಲ, ಗಣಿ, ಭೂವಿಜ್ಞಾನ ಮತ್ತು ಪರಿಸರ ಸಚಿವರು. **ದನಗಳ ಜಾತ್ರೆ ಉದ್ಘಾಟನೆ :** ಶ್ರೀ ಪ್ರಭು ಬಿ. ಚವ್ಹಾಣ್, ಪಶುಸಂಗೋಪನೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು. **ಮುಖ್ಯ ಅತಿಥಿಗಳು :** ಶ್ರೀ ತನ್ವೀರ್ ಸೇಠ್, ಶಾಸಕರು, ಮಾಜಿ ಸಚಿವರು, ಶ್ರೀ ಪಿ.ಜಿ.ಆರ್. ಸಿಂಧ್ಯಾ, ಮಾಜಿ ಸಚಿವರು, ರಾಜ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಶ್ರೀ ಎನ್. ಮಹೇಶ್, ಶಾಸಕರು, ಮಾಜಿ ಸಚಿವರು, ಶ್ರೀ ಆರ್. ನರೇಂದ್ರ, ವಿಧಾಸಭಾ ಸದಸ್ಯರು, ಹನೂರು, ಶ್ರೀ ಕೆ. ಮಹದೇವ್, ವಿಧಾನಸಭಾ ಸದಸ್ಯರು, ಪಿರಿಯಾಪಟ್ಟಣ, ಶ್ರೀ ಎಂ. ಸತೀಶ್ ರೆಡ್ಡಿ, ವಿಧಾನಸಭಾ ಸದಸ್ಯರು, ಬೊಮ್ಮನಹಳ್ಳಿ, ಶ್ರೀ ಆರ್. ಧರ್ಮಸೇನ, ವಿಧಾನಪರಿಷತ್ ಸದಸ್ಯರು, ಮೈಸೂರು, ಶ್ರೀ ಬಿ. ಸೋಮಶೇಖರ್, ಮಾಜಿ ಸಚಿವರು, ಶ್ರೀ ಶಂಕರ ಮಹಾದೇವ ಬಿದರಿ, ನಿವೃತ್ತ ಪೊಲೀಸ್ ಮಹಾನಿರ್ದೇಶಕರು, ಡಾ. ಪುಷ್ಪ ಅಮರನಾಥ್, ಅಧ್ಯಕ್ಷರು, ಕೆಪಿಸಿಸಿ (ಮಹಿಳಾ ಘಟಕ)

# ಮದುವೆ ಒಂದು ಪವಿತ್ರ ಬಂಧನ

ಜಾತ್ರಾ ಮಹೋತ್ಸವದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಬೋಧಿಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಹಾ ಜಂಟಿಕಾರ್ಯದರ್ಶಿಗಳಾದ **ಶ್ರೀ ಮುಕುಂದ್‌ರವರು** ಮಾತನಾಡಿ ಮದುವೆ ಕೇವಲ ಎರಡು ಕುಟುಂಬಕ್ಕೆ ಮಾತ್ರ ಸೀಮಿತವಲ್ಲ, ಸಾಮಾಜಿಕ, ಕೌಟಂಬಿಕ, ಧಾರ್ಮಿಕ, ನೆಲೆಗಟ್ಟನ್ನು ಹೊಂದಿದ್ದು, ತನ್ನದೇ ಆದ ಮಹತ್ವವನ್ನು ಹೊಂದಿದೆ. ಶರಣರ ಸಂಸ್ಕೃತಿಯಲ್ಲಿರುವಂತಹ ಶರಣಸತಿ–ಲಿಂಗಪತಿ ಎಂಬ ಕಲ್ಪನೆ ಸಮಾಜಕ್ಕೆ ಮಾದರಿಯಾಗಿದೆ ಎಂದರು.

ಬಹಳ ಹಿಂದೆ ಸ್ವರ್ಗದ ಗಂಗೆ ಹರಿಯುವ ಜಾಗದಲ್ಲಿ ಮೋಹ ಮತ್ತು ಬುದ್ಧಿ ನಡೆದು ಹೋಗುತ್ತಿದ್ದರು, ಗಂಗೆಯು ನನ್ನಲ್ಲೊಮ್ಮೆ ಮುಳುಗಿದರೆ ಉನ್ನತಿ ದೊರಕುವುದು ಎಂದಳು. ಮೋಹ ಒಂದು ಕ್ಷಣ ಯೋಚಿಸದೆ ಆ ಗಂಗೆಯಲ್ಲಿ ಮುಳುಗಿತು. ಹೊರಬರುತ್ತ ಮೋಹವು ಉನ್ನತೀಕರಣಹೊಂದಿ ಪ್ರೀತಿಗೆ ಪರಿವರ್ತನೆಯಾಗಿ ಭಕ್ತಿಯಾಗಿ ಹೊರಹೊಮ್ಮಿತು. ಆದರೆ ಬುದ್ಧಿ ಯೋಚಿಸಿ, ಮೋಹವನ್ನು ಪರಿಶೀಲಿಸಿದ ನಂತರ ಗಂಗೆಯಲ್ಲಿ ಮುಳುಗಿತು. ಹೊರಬರುತ್ತ ಬುದ್ಧಿಯು ಅಹಂಕಾರಕ್ಕೆ ಪರಿವರ್ತನೆಯಾಯಿತು. ಅಂದರೆ ಮದುವೆ ಮನುಷ್ಯನ ಮೋಹವನ್ನು ಪ್ರೀತಿ ಮತ್ತು ಭಕ್ತಿಯ ಕಡೆಗೆ ಪರಿವರ್ತಿಸುತ್ತದೆ. ಸಾಮೂಹಿಕ ವಿವಾಹವು ಕುಟುಂಬಕ್ಕೆ ಭಾರವಾಗದಂತೆ ನಡೆಯುವ ಜಾತಿ–ಭೇದವಿಲ್ಲದೆ, ಸಂಸ್ಕೃತಿ ಸಂಪ್ರದಾಯಗಳನ್ನು ಒಳಗೊಂಡಿರುವ ಧಾರ್ಮಿಕ ವಿಧಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. **–ಹರ್ಷಿತ ಎಂ**

# ಮಠಗಳ ಕಾರ್ಯ ಸರ್ಕಾರಗಳಿಗೆ ಮಾದರಿ



ನಾಡಿನಲ್ಲಿ ನೂರಾರು ವರ್ಷಗಳಿಂದ ಶ್ರೀಮಠಗಳು ನಡೆಸಿಕೊಂಡು ಬರುತ್ತಿರುವ ಅನ್ನ ಮತ್ತು ಅಕ್ಷರ ದಾಸೋಹಗಳ ಮಹತ್ವದ ಕಾರ್ಯವನ್ನು ಇಂದಿನ ನಮ್ಮ ಸರ್ಕಾರಗಳು ಅರ್ಥಮಾಡಿಕೊಂಡು ಅನುಸರಿಸುತ್ತಿದ್ದು, ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಮಧ್ಯಾಹ್ನದ ಬಿಸಿಯೂಟ (Mid day meals) ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಎಂದು ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಅಲ್ಲಂ ವೀರಭದ್ರಪ್ಪನವರು ಹೇಳಿದರು.

ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಈಶ್ವರನಿಗೆ ಬಿಲ್ವಪತ್ರೆ ಧರಿಸಿದರೆ ಕೋಟಿಕನ್ಯಾದಾನ ಮಾಡಿದ ಪುಣ್ಯಬರುತ್ತದೆ ಎಂದು ಹಿರಿಯರು ಹೇಳುತ್ತಾರೆ. ಶ್ರೀಕ್ಷೇತ್ರದಲ್ಲಿ ನಡೆಯುವ ಸಾಮೂಹಿಕ ವಿವಾಹದಲ್ಲಿ ಕನ್ಯಾದಾನ ಮಾಡುವಂತಹ ಪವಿತ್ರ ಕಾರ್ಯದಲ್ಲಿ ಪಾಲ್ಗೊಂಡಿರುವುದು ನಮ್ಮೆಲ್ಲರ ಪುಣ್ಯವೇ ಸರಿ.

ಉತ್ತರ ಕರ್ನಾಟಕದಲ್ಲಿ ತಲೆದೋರುವ ಬರ ಪರಿಸ್ಥಿತಿಯಿಂದ ಜನರು ಮದುವೆ ಮುಂತಾದ ಶುಭ ಕಾರ್ಯಗಳನ್ನು ಮಾಡಲು ಸಾಧ್ಯವಾಗದೆ, ಮಠಾಧೀಶರುಗಳ ಬಳಿ ತಮ್ಮ ಕಷ್ಟಗಳನ್ನು ಪರಿಹರಿಸುವಂತೆ ಕೇಳಿಕೊಳ್ಳುತ್ತಾರೆ.

ಇದನ್ನು ಮನಗಂಡ ಸುತ್ತೂರು ಶ್ರೀಗಳು, ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು ಹಾಗೂ ನಾಡಿನ ವಿವಿಧ ಮಠಾಧೀಶರುಗಳು ಸಾಮೂಹಿಕ ವಿವಾಹಗಳನ್ನು ಕೈಗೊಳ್ಳುವ ಮೂಲಕ ಜನರ ಬದುಕಿಗೆ ನೆರವಾಗಿದ್ದಾರೆ ಎಂದು ಹೇಳಿದ ಅವರು ಸುತ್ತೂರು ಶ್ರೀಮಠವು ಶಿಕ್ಷಣ, ಉದ್ಯೋಗ ನೀಡುವುದರ ಜೊತೆಗೆ ಸಮಾಜದ ಅಭಿವೃದ್ಧಿಗೆ ಪೂರಕವಾದ ವಿವಿಧ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ ಎಂದು ನುಡಿದರು. **– ವಿನುವಿರಾಟ್ ಸಿ**

## ಜಾತ್ರಾ ಮಹೋತ್ಸವ

### ಪೂಜೆ – ಉತ್ಸವ

**23 ಜನವರಿ 2020 ಗುರುವಾರ**

**ಪ್ರಾತಃಕಾಲ 4.00** : ಕರ್ತೃಗದ್ದುಗೆ : ಮಹಾರುದ್ರಾಭಿಷೇಕ

**ಬೆಳಗ್ಗೆ 5.00** : **ಶಿವದೀಕ್ಷೆ**
ಶ್ರೀಮಠದ ಗುರುಪರಂಪರೆ ಸಂಸ್ಮರಣೋತ್ಸವ
ಮಂತ್ರಮಹರ್ಷಿ ಗದ್ದುಗೆಗೆ ರುದ್ರಾಭಿಷೇಕ
54ನೆಯ ಲಿಖಿತಮಂತ್ರ ಸಂಸ್ಮರಣೋತ್ಸವ
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಗದ್ದುಗೆಗೆ ರುದ್ರಾಭಿಷೇಕ

**ಬೆಳಗ್ಗೆ 6.30** : **ಗೆಜ್ಜಗನಹಳ್ಳಿ** : ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನಾ ಪಥಸಂಚಲನ

**ಬೆಳಗ್ಗೆ 7.30** : ಷಟ್‌ಸ್ಥಲ ಧ್ವಜಾರೋಹಣ
ನಿ.ಪ್ರ.ಸ್ವ. ಶ್ರೀ ನಿರಂಜನ ಸ್ವಾಮಿಗಳು
ಶ್ರೀ ವಿರಕ್ತಮಠ, ಅತ್ತಿಹಳ್ಳಿ, ಕನಕಪುರ ತಾ.
ಧರ್ಮಸಂದೇಶ : ಷ.ಬ್ರ.ಶ್ರೀ ಇಮ್ಮಡಿ ಗುರುಲಿಂಗ ಸ್ವಾಮಿಗಳು, ಶ್ರೀ ಕುದೇರು ಮಠ, ಮೈಸೂರು

**ಬೆಳಗ್ಗೆ 8.30** : ಆದಿಜಗದ್ಗುರುಗಳವರ ಉತ್ಸವಮೂರ್ತಿಗೆ ರಾಜೋಪಚಾರ

**ಬೆಳಗ್ಗೆ 10.30** : **ರಥೋತ್ಸವ**

**ಸಂಜೆ 6.00** : ಮಹಾರುದ್ರಾಭಿಷೇಕ

**ರಾತ್ರಿ 9.00** : ಶ್ರೀ ನಂಜುಂಡೇಶ್ವರರು, ಶ್ರೀ ಜಗಜ್ಯೋತಿ ಬಸವೇಶ್ವರರು, ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರು, ಜಗದ್ಗುರು ಶ್ರೀ ಈಶಾನೇಶ್ವರ ಒಡೆಯರು, ಜಗದ್ಗುರು ಶ್ರೀ ಘನಲಿಂಗ ಶಿವಯೋಗಿಗಳವರು, ಮಂತ್ರಮಹರ್ಷಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು ಮತ್ತು ಕಾಯಕತಪಸ್ವಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಗಳ ಉತ್ಸವ

# ಜ್ಞಾನ–ವಿಜ್ಞಾನ ತಿಳಿಸುವ ಸಂಚಾರಿ ವಾಹನ





ವಸ್ತುಪ್ರದರ್ಶನದ ಆವರಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿರುವ ಸಂಚಾರಿ ವಿಜ್ಞಾನ ಪ್ರಯೋಗಾಲಯವು ಜೀವಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಭೌತಶಾಸ್ತ್ರಗಳಿಗೆ ಸಂಬಂಧಿಸಿದಂತೆ ವಿವಿಧ ಪ್ರಯೋಗಗಳನ್ನು ಸಂಚಾರಿ ವಾಹನದ ಮೂಲಕ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಅತಿ ಸುಲಭವಾಗಿ ತಿಳುವಳಿಕೆ ಮೂಡಿಸುವಲ್ಲಿ ಸಫಲರಾಗಿದ್ದಾರೆ. ಮಕ್ಕಳ ಮನಸ್ಸಿನಲ್ಲಿ ವಿಜ್ಞಾನದ ಬಗ್ಗೆ ಇರುವ ಭಯ ಹಾಗೂ ಗೊಂದಲಗಳನ್ನು ಹೋಗಲಾಡಿಸಲು ಸರಳ ಮತ್ತು ಸುಲಭದ ಮಾರ್ಗವನ್ನು ತಿಳಿಸುವ ಮೂಲಕ ಇತರೆ ವಿಷಯಗಳಂತೆ ಇದನ್ನು ಅರ್ಥೈಸಿಕೊಳ್ಳಬಹುದು ಎಂಬಂತೆ ವಿದ್ಯಾರ್ಥಿಗಳಿಗೆ ತಿಳಿಯಪಡಿಸುತ್ತಾರೆ. ಈ ಸಂಚಾರಿ ವಿಜ್ಞಾನ ಪ್ರಯೋಗಾಲಯ ಪ್ರತಿ ತಿಂಗಳಲ್ಲಿ ನಾಲ್ಕು ಬಾರಿ ವಿವಿಧ ಸರ್ಕಾರಿ ಶಾಲೆಗಳಿಗೆ ಸಂಚರಿಸಿ ವಿಜ್ಞಾನದ ಪ್ರಾಯೋಗಿಕ ಮಾಹಿತಿಗಳನ್ನು ನಿರಂತರವಾಗಿ ತಿಳಿಯಪಡಿಸುತ್ತಿದೆ.


ಅಲ್ಲದೆ ಈ ಸಮಿತಿಯವರು ತಿಂಗಳಿಗೊಮ್ಮೆ ಸಂವಾದ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ.

**– ಅನುಷ.ಪಿ**

# ತಾಳಿರಿ... ಪರಸ್ಪರ ಅರಿತು ಬಾಳಿರಿ...



ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಅತಿಥಿಗಳಾಗಿದ್ದ ಮಾಜಿ ಸಚಿವರಾದ ಡಾ. ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್‌ರವರು ಶ್ರೀಮಠವು ಇತರೆ ಮಠಗಳಿಗಿಂತ ಉನ್ನತ ಸ್ಥಾನದಲ್ಲಿದ್ದು, ಹಲವು ವರ್ಷಗಳಿಂದ ಮಂಗಳ ಕಾರ್ಯ ನಡೆಸಿಕೊಂಡು ಬಂದಿರುತ್ತದೆ. ಈ ಶುಭ ಕಾರ್ಯವು ಪರಮಪೂಜ್ಯರ ನೇತೃತ್ವದಲ್ಲಿ ಜರುಗುತ್ತಿರುವುದು ನಮ್ಮೆಲ್ಲರ ಪುಣ್ಯ. ಮದುವೆ ಎಂದರೆ ಎರಡು ಹೃದಯಗಳು ಮತ್ತು ಎರಡು ಮನೆತನಗಳು ಸೇರುವ ಬೆಸುಗೆಯಾಗಿದ್ದು, ತಾಳಿ ಎಂದರೆ ಸತಿಪತಿಯರು ತಾಳ್ಮೆಯಿಂದ ಬಾಳಬೇಕು ಎಂದರ್ಥ, ಇಂದು ಆಡಂಬರದ ಮದುವೆಗಳೇ ಹೆಚ್ಚಾಗಿದ್ದು ವಿಪರೀತ ಖರ್ಚುಮಾಡಿ ಮದುವೆ ಮಾಡುವ ಬದಲು, ಗುರುಹಿರಿಯರ ಸಮ್ಮುಖದಲ್ಲಿ ಆಶೀರ್ವಾದ ಪಡೆದು, ಗುರುಗಳು ತೋರುವ ಮಾರ್ಗದಲ್ಲಿ ನಡೆದರೆ ಬಾಳು ಬಂಗಾರವಾಗುವುದು ಎಂದ ಅವರು ನವಜೋಡಿಗಳು ಪರಸ್ಪರ ಭಾವನೆಗಳನ್ನು ಅರ್ಥಮಾಡಿಕೊಂಡು ಬಾಳಿರಿ ಎಂದು ಶುಭ ಹಾರೈಸಿದರು. **– ಮಂದಾರ**



ಜಾತ್ರಾ ಮಹೋತ್ಸವದ ಅಂಗವಾಗಿ ಹಿರಿಯರ ಮನೆ ಆವರಣದಲ್ಲಿ ಪ್ರದರ್ಶನಗೊಂಡ 'ದಕ್ಷಯಜ್ಞ' ನಾಟಕದ ಮನಮೋಹಕ ದೃಶ್ಯ

# ನವ ದಂಪತಿಗಳ ಮನದಾಳದ ಮಾತು

ಬಸವರಾಜು ನಾಯ್ಕ



ಜಾತ್ರಾ ಮಹೋತ್ಸವದಲ್ಲಿ ನಾವು ಕುಟುಂಬದವರ ಹಾಗೂ ಬಂಧು-ಬಳಗದವರ ಜೊತೆಯಲ್ಲಿ ವಿವಾಹವಾಗುತ್ತಿರುವುದು ತುಂಬಾ ಸಂತೋಷವಾಗಿದೆ. ಇಂತಹ ಬೃಹತ್ ವೇದಿಕೆಯಲ್ಲಿ ಸುತ್ತೂರು ಶ್ರೀಗಳವರು, ಹರಗುರು ಚರಮೂರ್ತಿಗಳು, ಮಾಜಿ ಪ್ರಧಾನ ಮಂತ್ರಿಗಳವರ ಹಾಗೂ ಸಾವಿರಾರು ಜನರ ಸಮ್ಮುಖದಲ್ಲಿ ವಿವಾಹವಾಗುತ್ತಿರುವುದು ನಮ್ಮ ಪುಣ್ಯವೆಂದು ಭಾವಿಸುತ್ತೇವೆ.

**– ಶ್ರೀ ಶೇಖರ್, ಶ್ರೀಮತಿ ತೇಜಶ್ರೀ, ತಮಿಳುನಾಡು**





ನಾವು ಈ ಜಾತ್ರಾ ಮಹೋತ್ಸವದ ವಿವಾಹ ವೇದಿಕೆಯಲ್ಲಿ ಗುರುಗಳ ಆಶೀರ್ವಾದ ಪಡೆದು ದಾಂಪತ್ಯಕ್ಕೆ ಕಾಲಿಡುತ್ತಿರುವುದು ತುಂಬಾ ಸಂತೋಷ ತಂದಿದೆ. ಪ್ರಾಚೀನ ಇತಿಹಾಸ ಹೊಂದಿರುವ ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ವಿವಾಹವಾಗಿರುವ ನಾವೇ ಧನ್ಯರು.

**– ಶ್ರೀ ಚೆಲುವರಾಜ್, ಶ್ರೀಮತಿ ರಾಜೇಶ್ವರಿ**

ಶ್ರೀಕ್ಷೇತ್ರದಲ್ಲಿ ಶ್ರೀಗಳವರ ಸನ್ನಿಧಿಯಲ್ಲಿ ವಿವಾಹವಾಗುತ್ತಿರುವುದು ಸಂತೋಷ ತಂದಿದೆ, ನಾವು ಮೂಲತಃ ಮೈಸೂರಿನವರಾಗಿದ್ದು, ಇಲ್ಲಿನ ಸಾಮೂಹಿಕ ವಿವಾಹವು ವಿಶೇಷವಾಗಿದ್ದು, ಜಾತಿ-ಮತ ಭೇದವಿಲ್ಲದೆ ಎಲ್ಲರೂ ಒಂದೆ ಎಂಬ ಭಾವನೆ ಇಲ್ಲಿದೆ. **–ಶ್ರೀ ಉಮೇಶ್, ಶ್ರೀಮತಿ ಭಾರತಿ**



ನಾವುಗಳು ಹಿರಿಯರ ಒಪ್ಪಿಗೆಯಂತೆ ಶ್ರೀಕ್ಷೇತ್ರದಲ್ಲಿ ವಿವಾಹವಾಗುತ್ತಿರುವುದು ತುಂಬಾ ಸಂತೋಷ ತಂದಿದೆ. ಬಡತನದಲ್ಲಿರುವ ನಮ್ಮಂತಹ ಕುಟುಂಬಗಳು ಸಾಮೂಹಿಕ ವಿವಾಹದಲ್ಲಿ ವಿವಾಹವಾಗಿ ಬದುಕನ್ನು ಕಟ್ಟಿಕೊಂಡು ಸುಂದರ ಬದುಕನ್ನು ನಡೆಸಲು ಶ್ರೀಗಳವರು ನೆರವಾಗಿದ್ದಾರೆ.

**– ಶ್ರೀ ದೇವಾರಾಜ್, ಶ್ರೀಮತಿ ರೋಜಾ**

# ‘ಶ್ರೀಮಠದ ಕಾರ್ಯ ಶ್ಲಾಘನೀಯ’

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಹೆಚ್ಚಿನ ಕೊಡುಗೆ ನೀಡುತ್ತಿರುವುದು ಶ್ರೀಕ್ಷೇತ್ರ ಸುತ್ತೂರು ಎಂದು ಶಾಸಕರಾದ ಶ್ರೀ ಸಿ. **ಪುಟ್ಟರಂಗಶೆಟ್ಟಿರವರು** ತಿಳಿಸಿದರು. ಭಜನಾ ಮೇಳ ಉದ್ಘಾಟನಾ ಸಮಾರಂಭ ದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಧಾರ್ಮಿಕ ಚಟುವಟಿಕೆಗಳಲ್ಲದೆ ಶ್ರೀಮಠವು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲೂ ಕೂಡ ಹೆಚ್ಚಿನ ಕೊಡುಗೆ ನೀಡುತ್ತಿದ್ದು, ನೂರಾರು ಶಿಕ್ಷಣ ಸಂಸ್ಥೆಗಳ ಮೂಲಕ ಲಕ್ಷಾಂತರ ಜನರಿಗೆ ಶಿಕ್ಷಣ ನೀಡುತ್ತಾ ಬಂದಿದೆ. ಹಾಗೆಯೇ ಸುಸಜ್ಜಿತ ವ್ಯವಸ್ಥೆಯುಳ್ಳ ಆಸ್ಪತ್ರೆಗಳ ಮೂಲಕ ಆರೋಗ್ಯ ಕೇಂದ್ರದಲ್ಲಿ ತನ್ನದೇ ಆದ ಕೊಡುಗೆ ನೀಡುತ್ತಿದೆ. ಎಂದ ಅವರು ಕೃಷಿ, ಕಲೆ, ಕ್ರೀಡೆ, ಸಾಂಸ್ಕೃತಿಕ ಕ್ಷೇತ್ರಗಳಿಗೂ ಅದ್ಯತೆ ನೀಡುತ್ತಿದ್ದು ಜಾತ್ರಾ ಮಹೋತ್ಸವದಲ್ಲಿ ಏರ್ಪಡಿಸಿರುವ ವಿವಿಧ ಕಾರ್ಯಕ್ರಮಗಳ ಸದುಪಯೋಗಪಡಿಸಿ ಕೊಳ್ಳಬೇಕೆಂದು ಹೇಳಿದರು. **– ಹರ್ಷಿತಾ ಎಂ.**



**ಅಷ್ಟೋತ್ತರ ಶತಕುಂಭಾಭಿಷೇಕದಲ್ಲಿ ರಾಮಾಪುರ, ನೆರಗ್ಯಾತನಹಳ್ಳಿ, ಕುದೇರು ಶ್ರೀಗಳು ಹಾಗೂ ಕುಂಭ ಹೊತ್ತ ಕನ್ಯೆಯರು**

# ದೋಣಿ ವಿಹಾರ ಮನಸ್ಸಿಗೆ ಹಿತಕರ

ಜಾತ್ರಾ ಮಹೋತ್ಸವದ ಅಂಗವಾಗಿ ಪ್ರತಿವರ್ಷ ದಂತೆ ಈ ವರ್ಷವು ಕಪಿಲಾ ನದಿ ತೀರದಲ್ಲಿ ದೋಣಿ ವಿಹಾರವನ್ನು ಆಯೋಜಿಸಲಾಗಿದೆ.

ದೋಣಿಯು 18 ಸೀಟುಗಳನ್ನು ಒಳಗೊಂಡಿದ್ದು, ಪ್ರತಿ ಪ್ರಯಾಣಿಕರಿಗೆ ಸುರಕ್ಷಾ ಕವಚವನ್ನು ನೀಡಲಾಗುತ್ತಿದೆ. ಹಿರಿಯ ನಾಗರಿಕರಿಗೆ ರೂ.15/-, ಮಕ್ಕಳಿಗೆ ರೂ.10/- ದರ ನಿಗದಿಗೊಳಿಸಲಾಗಿದೆ. ದೋಣಿಯನ್ನು ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ನೀಡಿದ್ದು, ಜಾತ್ರೆಗೆ ಬರುವ ಯಾತ್ರಿಗಳ ವಿಹಾರಕ್ಕಾಗಿ ಕಪಿಲಾ ನದಿಯ ಸುಂದರ ತಾಣದಲ್ಲಿ "ಲಕ್ಷ್ಮಣ ತೀರ್ಥ" ಎಂಬ ದೋಣಿಯು ಯಾತ್ರಿಗಳನ್ನು ರಂಜಿಸುತ್ತಿದೆ. **–ಅನನ್ಯ.ಜಿ.ಎಸ್**



**ಗಣ್ಯರಿಂದ ದೋಣಿ ವಿಹಾರಕ್ಕೆ ಚಾಲನೆ**

## ಜಾತ್ರೆಯೊಳಗೊಂದು ಸುತ್ತು



ಶ್ರೀಕ್ಷೇತ್ರದ ಜಾತ್ರಾ ಮಹೋತ್ಸವವು ವರ್ಷದಿಂದ ವರ್ಷಕ್ಕೆ ಹಲವು ವೈವಿಧ್ಯತೆಗಳಿಂದ ನಡೆಯುತ್ತಾ ಬಂದಿದೆ. ಕಲೆ, ಸಂಸ್ಕೃತಿ, ಸಂಗೀತ, ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ಶ್ರೀಮಠದಿಂದ ದೊರೆಯುತ್ತಿದೆ. ರೈತರಿಗೆ ಬೇಕಾದ ಬೆಳೆಗಳ ಬಗೆಗಿನ ಮಾಹಿತಿ ಕೃಷಿ ಮೇಳದಲ್ಲಿ ದೊರೆಯುತ್ತದೆ. ಅಲ್ಲದೆ ಎಲ್ಲ ಮಕ್ಕಳು ಶಿಕ್ಷಣವಂತರಾಗಲು ಉಚಿತ ಶಾಲೆಗಳನ್ನು ನಡೆಸುತ್ತಿರುವುದನ್ನು ಶ್ರೀಕ್ಷೇತ್ರದಲ್ಲಿ ಕಾಣಬಹುದು ಅದಕ್ಕಾಗಿ ಶ್ರೀಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. **–ಶ್ರೀ ದೊಡ್ಡಗವಿಬಸಪ್ಪ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಚಾ.ನಗರ**

* * *



ಕಳೆದ ಮೂರು ವರ್ಷಗಳಿಂದ ಜಾತ್ರೆಗೆ ಬರುತ್ತಿದ್ದೇನೆ. ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನವಳಾಗಿದ್ದು, ನನ್ನ ಮೊಮ್ಮಕ್ಕಳು ಸುತ್ತೂರು ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಸುತ್ತೂರು ಜಾತ್ರೆಯು ಹತ್ತೂರು ಜಾತ್ರೆಗೆ ಸಮವಾಗಿದೆ ಎಂದರು. **– ಗೌರಮ್ಮ, ಬಿಜಾಪುರ ಜಿಲ್ಲೆ**

* * *



ಶ್ರೀಕ್ಷೇತ್ರದಲ್ಲಿ ಇದೊಂದು ಬೃಹತ್ ಜಾತ್ರಾ ಮಹೋತ್ಸವವಾಗಿದೆ ಇಲ್ಲಿನ ಎಲ್ಲ ಸ್ವಯಂಸೇವಕರು ತುಂಬಾ ಆಸಕ್ತಿ ಮತ್ತು ಶಿಸ್ತುಬದ್ಧರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಶ್ರೀಮಠಕ್ಕೆ ಜನಸಾಮಾನ್ಯರ ಸಹಕಾರ ಬಹಳ ಚೆನ್ನಾಗಿದೆ. **– ನಿಂಗರಾಜು ನಾಯ್ಕ, ಚಾ.ನಗರ ಜಿಲ್ಲೆ**

* * *



ಸುತ್ತೂರು ಶ್ರೀಗಳವರು ಬಡವರಿಗೆ ಅನುಕೂಲವಾಗುವಂತೆ ಅನ್ನದಾಸೋಹ, ಅಕ್ಷರ ದಾಸೋಹ ಮಾಡುತ್ತಿರುವುದು ಪ್ರಶಂಸನೀಯವಾಗಿದೆ. ಸಾಮೂಹಿಕ ವಿವಾಹದ ಮೂಲಕ ಅನೇಕ ಬಡಕುಟುಂಬದ ವಧು-ವರರು ಜೀವನವನ್ನು ಕಟ್ಟಿಕೊಳ್ಳಲು ಶ್ರೀಗಳವರು ನೆರವಾಗಿದ್ದಾರೆ. ಈ ಜಾತ್ರೆಗೆ ಬರಲು ನನಗೆ ತುಂಬಾ ಸಂತೋಷವಾಗಿದೆ. **– ರಾಜೇಶ್, ಟಿ. ನರಸೀಪುರ**

* * *



ಜಾತ್ರಾ ಮಹೋತ್ಸವವು ಮೈಸೂರಿನ ಎರಡನೆಯ ದಸರಾ ಎಂದು ಪ್ರಸಿದ್ಧಿಯಾಗಿದೆ ಇದು ಅತ್ಯಂತ ವೈಭವದಿಂದ ನಡೆಯುತ್ತಿದೆ. 5 ವರ್ಷಗಳಿಂದ ಜಾತ್ರೆಗೆ ಬರುತ್ತಿದ್ದೇನೆ, ಇಲ್ಲಿಗೆ ಬಂದವರಿಗೆ ಯಾವ ತೊಂದರೆಯಾಗದಂತೆ ಪೊಲೀಸ್ ಭದ್ರತಾ ವ್ಯವಸ್ಥೆ ಇದೆ. **– ಲೀಲಾವತಿ, ಕೇರಳ**

* * *




ಮೊದಲಬಾರಿಗೆ ಜಾತ್ರೆಗೆ ಬರುತ್ತಿದ್ದೇನೆ, ಜಾತ್ರೆಯಲ್ಲಿ ತಿಂಡಿ-ಊಟ-ವಸತಿ ಎಲ್ಲರಿಗೂ ಸಿಗುವಂತೆ ವ್ಯವಸ್ಥೆ ಮಾಡಿದ್ದಾರೆ. ಶ್ರೀಕ್ಷೇತ್ರದಲ್ಲಿ ಧಾರ್ಮಿಕ, ಸಾಮಾಜಿಕ, ಸಂಸ್ಕೃತಿಯ ದರ್ಶನವಾಗುತ್ತಿದೆ.

**– ಅನಿತಾ.ಸಿ, ಮೈಸೂರು**

**ಕೃಷ್ಣ ಮಾಧುರಿ, ಅನನ್ಯ, ಬಸವರಾಜು ನಾಯ್ಕ**

## ಕರ್ತೃಗದ್ದುಗೆಗೆ ಹಸಿರುವಾಣಿ ಅಲಂಕಾರ



# ಜೀವನ–ಸುಖ ದುಃಖಗಳ ಸಮ್ಮಿಲನ

ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಸಾಮೂಹಿಕ ವಿವಾಹದಲ್ಲಿ ಮುಖ್ಯ ಅತಿಥಿಗಳಾಗಿ ಚಿತ್ರದುರ್ಗದ ವಿಧಾನ ಪರಿಷತ್ ಸದಸ್ಯರಾದ **ಶ್ರೀ ಜಿ. ರಘು ಆಚಾರ್‌ರವರು** ಹೊಸ ಸಂಸಾರಕ್ಕೆ ಹೆಜ್ಜೆ ಇಡುತ್ತಿರುವ ನವ ಜೋಡಿಗಳ ಬದುಕು ಅನ್ಯೋನ್ಯವಾಗಿರಬೇಕು. ಕಷ್ಟಬಂದಾಗ ಕುಗ್ಗದೆ ಸುಖ ಬಂದಾಗ ಹಿಗ್ಗದೆ ಹಾಲು–ಜೇನಿನಂತೆ ಹೊಂದಾಣಿಕೆ, ಸಾಮರಸ್ಯದಿಂದ ಬಾಳಬೇಕು. ಗುರುಹಿರಿಯರನ್ನ ಗೌರವಿಸಿ ಸಂಸ್ಕಾರವಂತರಾಗಿ ಜೀವನ ನಡೆಸಬೇಕು ಆಗ ಬದುಕು ಬಂಗಾರವಾಗುತ್ತದೆ ಎಂದು ದಾಂಪತ್ಯ ಜೀವನಕ್ಕೆ ಕಾಲಿಡುತ್ತಿರುವವರಿಗೆ ಕಿವಿಮಾತು ಹೇಳಿದರು. ಶ್ರೀಮಠವು ಪ್ರತಿ ವರ್ಷ ಜಾತಿ–ಭೇದವಿಲ್ಲದೆ ಸಾಮೂಹಿಕ ವಿವಾಹವನ್ನು ನಡೆಸಿಕೊಂಡು ಬರುತ್ತಿರುವುದು ಸಮಾಜಕ್ಕೆ ಮಾದರಿಯಾಗಿದೆ. ಮೈಸೂರು ದಸರದಷ್ಟೆ ಸುತ್ತೂರು ಜಾತ್ರೆಯೂ ಬಹಳ ಪ್ರಸಿದ್ಧವಾಗಿದೆ ಎಂದು ಹೇಳಿದರು. – **ಚೈತ್ರ ಎಂ**

# ಮನಸ್ಸು–ಮನಸ್ಸುಗಳು ಒಂದಾದರೆ ಲಗ್ನವಾದಂತೆ

ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೇಲೂರಿನ ವಿಧಾನಸಭಾ ಸದಸ್ಯರಾದ **ಶ್ರೀ ಕೆ.ಎಸ್.ಲಿಂಗೇಶ್‌ರವರು** ಮಾತನಾಡುತ್ತಾ, ಸುತ್ತೂರು ಶ್ರೀಮಠದ ಕಾರ್ಯ ಕಲ್ಯಾಣ ರಾಜ್ಯದೆಡೆಗೆ ಕೊಂಡೊಯ್ಯುತ್ತದೆ, ಅಂದೇ ಬಸವಣ್ಣನವರು ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿದರು ಅದೇ ರೀತಿ ಶ್ರೀಕ್ಷೇತ್ರದಲ್ಲಿ ಶ್ರೀಗಳು ಸಾಮೂಹಿಕ ವಿವಾಹ, ಶಿಕ್ಷಣ, ಕಲೆ, ವಿಜ್ಞಾನ ಹೀಗೆ ಹಲವು ವಿಷಯಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಸಮಾಜದ ಪಿಡುಗಾಗಿರುವ ಬಡತನ, ಜೀತಪದ್ಧತಿ, ಜಾತಿವ್ಯವಸ್ಥೆ ಹೋಗಲಾಡಿಸಿ, ಸಮ ಸಮಾಜ ನಿರ್ಮಿಸಲು ಸುತ್ತೂರು ಶ್ರೀಗಳು ಹಾಗೂ ಶ್ರೀ ವಿರೇಂದ್ರ ಹೆಗ್ಗಡೆಯವರು ಬಸವಾದಿಶರಣರ ಹಾದಿಯಲ್ಲಿ ನಡೆಯುತ್ತಿದ್ದಾರೆ. ನಮ್ಮಲ್ಲೇ ದೇವರನ್ನು ಕಂಡುಕೊಳ್ಳಬೇಕು ಅದು ಯಾವಾಗ ಸಾಧ್ಯವೆಂದರೆ ನಾವು ಪ್ರಾಮಾಣಿಕತೆಯಿಂದ ಇದ್ದಾಗ ಮಾತ್ರ, ಎಲ್ಲರೂ ಒಂದಾಗಿ ದೇಶಭಕ್ತಿಯನ್ನು ಮೆರಸಬೇಕು ಎಂದು ಹೇಳಿದರು. –**ರಕ್ಷಿತ .ವಿ**


# ಕೃಷಿ ಸಂಸ್ಕೃತಿಯನ್ನು ಬಿಂಬಿಸುವ ಜಾತ್ರೆ



ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಭಜನಾ ಮೇಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಸಚಿವರಾದ ಶ್ರೀ **ಪಿ.ಎಂ. ನರೇಂದ್ರಸ್ವಾಮಿ** ಅವರು ಮಾತನಾಡುತ್ತಾ, ಶ್ರೀಕ್ಷೇತ್ರವು ಪವಾಡ ಪುರುಷರಾದ ಶ್ರೀ ಮಲೆ ಮಹದೇಶ್ವರರು ಪಾದಸ್ಪರ್ಶಿಸಿದ ಪುಣ್ಯ ಸ್ಥಳವಾಗಿದ್ದು, ಮಠದ ಶ್ರೇಯೋಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳಂತಹ ಶ್ರಮದ ಹಿಂದೆ ಮಹದೇಶ್ವರರ ಆಶೀರ್ವಾದವಿದೆ. ಆದ್ದರಿಂದ ಶ್ರೀಕ್ಷೇತ್ರದ ಶಕ್ತಿ ಮತ್ತು ಮಹಿಮೆಯು ಅಪಾರವಾದುದ್ದಾಗಿದೆ.

ಜಾತ್ರೆಯಲ್ಲಿ ಕೃಷಿ ಮೇಳವನ್ನು ಆಯೋಜಿಸಿರುವುದಲ್ಲದೇ ಬಹಳ ವರ್ಷಗಳ ಹಿಂದೆ ಸುತ್ತೂರಿನಲ್ಲಿ ಕೃಷಿ ವಿಜ್ಞಾನ ಕೇಂದ್ರವನ್ನು ತೆರೆಯುವ ಮೂಲಕ ಶ್ರೀಗಳು ರೈತರ ಬಾಳಿಗೆ ಆಶಾಕಿರಣವಾಗಿದ್ದಾರೆ. ಆಧುನಿಕ ಕೃಷಿ ತಂತ್ರಜ್ಞಾನದ ಭರಾಟೆಯಲ್ಲಿ ಉಳುಮೆಯ ಎತ್ತುಗಳು ಕಣ್ಮರೆಯಾಗುತ್ತಿವೆ. ಇಂಥಹ ಸಂದರ್ಭದಲ್ಲಿ ದನಗಳ ಜಾತ್ರೆಯನ್ನು ಆಯೋಜಿಸುವುದರೊಂದಿಗೆ ನಮ್ಮ ಮೂಲ ಕೃಷಿ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಸತ್ಕಾರ್ಯದಲ್ಲಿ ನಿರತರಾಗಿದ್ದಾರೆ. ಕಳೆದ ವರ್ಷ ಮಳವಳ್ಳಿ ತಾಲ್ಲೂಕಿನಲ್ಲಿ ಜರುಗಬೇಕಾಗಿದ್ದ ಆದಿಜಗದ್ಗುರುಗಳವರ 1060ನೇ ಜಯಂತಿಯು ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ಪ್ರವಾಹದಿಂದ ಸ್ಥಗಿತಗೊಂಡಿದ್ದು, ಈ ಬಾರಿ ಜಯಂತಿಯನ್ನು ನಡೆಸಲು ಪೂಜ್ಯರು ಅನುಮತಿ ನೀಡಿರುವುದು ನಮ್ಮ ಪುಣ್ಯ ಎಂದರು. – **ದೀಪಶ್ರೀ ಕೆ.ಪಿ.**

# ಸರ್ವರಿಗೂ ಸಮಪಾಲು–ಸಮಬಾಳು



ರಾಜ್ಯಮಟ್ಟದ ಭಜನಾ ಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರಾದ ಶ್ರೀ **ಕೋಟ ಶ್ರೀನಿವಾಸ ಪೂಜಾರಿಯವರು** ಮಾತನಾಡಿ ರಾಜ್ಯದಲ್ಲಿರುವ ಶ್ರೀಮಠಗಳಲ್ಲಿ ನಾನು ಅತ್ಯಂತ ಗೌರವದಿಂದ ಕಾಣುವ ಮಠವೆಂದರೆ ಸುತ್ತೂರು ಶ್ರೀಮಠ. ಬಸವಾದಿ ಶರಣರ ಕಾಲದಿಂದಲೂ ಮಠಗಳು ವಿದ್ಯೆ, ಅನ್ನ, ವಸತಿಯನ್ನು ನೀಡುತ್ತಾ ಬಂದಿವೆ. ಅದರಲ್ಲಿ ಮುಂಚೂಣಿಯಲ್ಲಿರುವುದು ಸುತ್ತೂರು ಮಠ ಎಂದರು.

ಮನುಷ್ಯ ಜಾತಿ ತಾನೊಂದೆ ವಲಂ ಎನ್ನುವ ಹಾಗೆ ಜಾತಿ, ವರ್ಗ, ವರ್ಣವನ್ನು ಮೀರಿ ಶ್ರೀಮಠ ಶಿಕ್ಷಣ, ಕೃಷಿ, ಸಾಮಾಜಿಕ, ಧಾರ್ಮಿಕ ಕಾರ್ಯಗಳಿಗೆ ಒತ್ತನ್ನು ನೀಡುತ್ತಾ ಬಂದಿದೆ. ಸರ್ಕಾರಗಳು ಮಾಡದೇ ಇರುವ ಕಾರ್ಯಗಳನ್ನು ಶ್ರೀಮಠ ಮಾಡುತ್ತಿದೆ. ಸರ್ವರಿಗೂ ಸಮಪಾಲು ಸಮಬಾಳು ಎಂಬಂತೆ ಪೂಜ್ಯಶ್ರೀಗಳವರು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ ಎಂದರು.

**–ಚಂದನ**

## ಸಾಂಸ್ಕೃತಿಕ ಕಾರ್ಯಕ್ರಮಗಳು



### 23 ಜನವರಿ 2020 ಗುರುವಾರ

ಗದ್ದುಗೆ ಆವರಣದಲ್ಲಿ ಬೆಳಗ್ಗೆ 8.00ಕ್ಕೆ ನಾದಸ್ವರ, 9.00ಕ್ಕೆ ಜನಪದ ತಂಡಗಳಿಂದ ವಿವಿಧ ಕಲಾಪ್ರದರ್ಶನ, ಮಧ್ಯಾಹ್ನ 2.00ಕ್ಕೆ ಕೋಲಾರದ ಕೀರ್ತನ ಕಲಾಭೂಷಣ ಶ್ರೀ ಎನ್.ಆರ್. ಜ್ಞಾನಮೂರ್ತಿರವರಿಂದ ಶಿವಕಥಾ ಸಂಕೀರ್ತನೆ ಹಾಗೂ ಸಂಜೆ 6.30ಕ್ಕೆ ದೊಡ್ಡಬಳ್ಳಾಪುರದ ನಾಟ್ಯ ಮಯೂರಿ ಕಲಾ ಕೇಂದ್ರದ ನೃತ್ಯವೈಭವದವರಿಂದ ಭರತನಾಟ್ಯ ಪ್ರದರ್ಶನವಿರುತ್ತದೆ. ರಾತ್ರಿ 7.30ಕ್ಕೆ ಬೆಂಗಳೂರಿನ ಹೆಚ್.ಎಸ್.ಆರ್. ಬಡಾವಣೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯವರಿಂದ 'ತಿರುಕನ ಕನಸು' ಮತ್ತು 'ಮಂಗಗಳ ಉಪವಾಸ' (ಪತ್ಯಾಧಾರಿತ ನಾಟಕ) ಎಂಬ ನಾಟಕ ಪ್ರದರ್ಶನವಿರುತ್ತದೆ. ರಾತ್ರಿ 9.00 ಗಂಟೆಗೆ ಬೆಂಗಳೂರಿನ ಶ್ರೀ ವೆಂಕಟೇಶಮೂರ್ತಿ ಮತ್ತು ತಂಡದವರಿಂದ ಜನಪದ ಜಾದೂ ಪ್ರದರ್ಶನವಿದೆ.

## ಸಂವಿಧಾನದ ಆಶಯಗಳನ್ನು ಸಾಕಾರಗೊಳಿಸುತ್ತಿರುವ ಶ್ರೀಮಠ

ಜಾತ್ರಾ ಮಹೋತ್ಸವದ ಅಂಗವಾಗಿ ರಾಜ್ಯ ಮಟ್ಟದ 28ನೇ ಭಜನಾ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರು ಸುತ್ತೂರು ಶ್ರೀ ಕ್ಷೇತ್ರದ ಬಗ್ಗೆ ಮಾತನಾಡುತ್ತಾ, ಒಂದು ವಾರ ಕಾಲ ನಡೆಯುವ ಈ ಜಾತ್ರೆಯಲ್ಲಿ ನಾಡಿನ ಜನರು, ರಾಜಕೀಯ ಮುಖಂಡರು, ಸರ್ಕಾರದ ಪ್ರತಿನಿಧಿಗಳು, ಚುನಾಯಿತ ಪ್ರತಿನಿಧಿಗಳನ್ನು ಕರೆಯಿಸಿ ಒಂದು ಸಮ್ಮಿಲನದ ಕಾರ್ಯಕ್ರಮವನ್ನು ಶ್ರೀ ಕ್ಷೇತ್ರವು ಹಲವು ವರ್ಷಗಳಿಂದ ಮಾಡುತ್ತಾ ಬರುತ್ತಿರುವುದು ಸಂತೋಷದಾಯಕವಾಗಿದೆ.



ಸುತ್ತೂರ ಜಾತ್ರೆ ಎಂದರೆ ಕೇವಲ ರಥೋತ್ಸವ, ದನಗಳ ಜಾತ್ರೆ, ದಾಸೋಹಕ್ಕೆ ಸೀಮಿತವಾಗಿಲ್ಲದೆ ಜಾನಪದ, ಸಾಹಿತ್ಯ, ಕಲೆ, ನಾಡು ನುಡಿಯ ಬಗ್ಗೆಯು ಅರಿವು ಮೂಡಿಸುವ ಬೃಹತ್ ವೇದಿಕೆಯಾಗಿದೆ ಎನ್ನುತ್ತಾ, ಗ್ರಾಮೀಣ ಜನರ ಜೀವನ ಕ್ರಮವನ್ನು ಇಲ್ಲಿ ನೆನಪಿಸಿ ಕೊಡುತ್ತಿರುವುದು ವೈಯಕ್ತಿಕವಾಗಿ ಖುಷಿ ತಂದುಕೊಟ್ಟಿದೆ ಎಂದು ಹೇಳಿದರು. ಭಜನೆ ಮತ್ತು ನಾಟಕ ಇಂತಹ ಕಾರ್ಯಕ್ರಮಗಳನ್ನು ಜಾತ್ರೆಯಲ್ಲಿ ಆಯೋಜಿಸುವ ಮುಖಾಂತರ ನಮ್ಮ ಶ್ರೇಷ್ಟ ಸಂಸ್ಕೃತಿಯನ್ನು ನೆನಪಿಸುವ ಕೆಲಸವನ್ನು ಶ್ರೀಮಠ ಮಾಡುತ್ತಾ ಬಂದಿದೆ. ಸುತ್ತೂರು ಶ್ರೀಕ್ಷೇತ್ರದ ಜಾತ್ರೆಯು ಜಾತ್ಯಾತೀತವಾಗಿದ್ದು, ಸಂವಿಧಾನದ ಆಶಯಗಳು ಇಲ್ಲಿ ಸಹಕಾರಗೊಂಡು ಎಲ್ಲಾ ಜನಾಂಗದವರಿಗೂ ಶ್ರೀಕ್ಷೇತ್ರ ಪವಿತ್ರ ಸ್ಥಳವಾಗಿದೆ ಎಂದು ಅಭಿಪ್ರಾಯಪಟ್ಟರು. – ಶುಭಶ್ರೀ



## 'ಶ್ರೀಮಠ ಸಮಾಜಮುಖಿ'

(ಮೊದಲ ಪುಟದಿಂದ)

ಅಕ್ಷರದಾಸೋಹದಂತಹ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿದ್ದು ಈ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಅನ್ನದಾತನಿಗೆ ಅನುಕೂಲವಾಗುವಂತಹ ಕೃಷಿ ಮೇಳವನ್ನು ವಸ್ತು ಪ್ರದರ್ಶನದಲ್ಲಿ ಏರ್ಪಡಿಸಿ ಕೃಷಿಕರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಈ ಸದುಪಯೋಗವನ್ನು ಎಲ್ಲಾ ರೈತರು ಪಡೆದುಕೊಳ್ಳಬೇಕೆಂದು ಹೇಳಿದರು.

ಹಿಂದಿನ ಗುರುಗಳಾದ ಶ್ರೀ ರಾಜೇಂದ್ರ ಶ್ರೀಗಳವರು ಮಾಡಿದ ಹಲವಾರು ಜನಪರ ಕಾರ್ಯಗಳನ್ನು ಇಂದಿನ ಶ್ರೀಗಳವರು ಮುಂದುವರಿಸಿಕೊಂಡು ಹೋಗುವುದರ ಜೊತೆಗೆ ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಶ್ರೀಮಠದ ಕೀರ್ತಿಯನ್ನು ಉತ್ತುಂಗಕ್ಕೇ ಏರಿಸಿದ್ದಾರೆ ಎಂದು ಹೇಳಿ ನೂತನ ದಂಪತಿಗಳ ಬದುಕು ಬಂಗಾರವಾಗಲಿ ಎಂದು ಹಾರೈಸಿದರು. – ಆತಿಷ ಲೊಕ್ .ಎಸ್

## ಸರಳ ಜೀವನ ನಡೆಸಿ

(ಮೊದಲ ಪುಟದಿಂದ)

ನೀವೇ ಪುಣ್ಯವಂತರು. ಇದು ಸಿನಿಮಾದ ಮದುವೆಯಲ್ಲ ಪಾವಿತ್ರ್ಯತೆಯಿಂದ ಕೂಡಿದ ಮದುವೆ, ಜೀವನ ವೆನ್ನುವುದು ಎತ್ತಿನಗಾಡಿಯಂತೆ ಪತಿಪತ್ನಿಯರು ಇಬ್ಬರು ಎತ್ತುಗಳ ಹಾಗೆ ಸಮಾನವಾಗಿ ಸಾಮರಸ್ಯ ದಿಂದ ಬದುಕಬೇಕು. ಮದುವೆ ಎಂದರೆ ಹಾರ ಬದಲಾಯಿಸಿಕೊಳ್ಳುವುದಷ್ಟೇ ಅಲ್ಲ ಬದಲಾಗಿ ಇಬ್ಬರು ಪರಸ್ಪರ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು, ಗಂಡು ಹೆಣ್ಣು ಇಬ್ಬರು ಶಿಸ್ತಿನಿಂದ ಒಬ್ಬರಿಗೊಬ್ಬರು ಪ್ರೀತಿ ವಿಶ್ವಾಸದಿಂದ ಬಾಳಬೇಕು ಎಂದರಲ್ಲದೇ ಇಂತಹ ವಿವಾಹಗಳ ಮೂಲಕ ಅನೇಕ ವಿಚಾರಗಳನ್ನು ತಿಳಿಯಬಹುದಾಗಿದೆ, ಈ ವಿವಾಹವು ಸಾಮೂಹಿಕವಾಗಿ ನಡೆದಿದ್ದರೂ ಕೂಡ ನೀವು ದೇವತೆಗಳ ಹಾಗೆ ಕಾಣುತ್ತಿದ್ದೀರಿ. ಸುತ್ತೂರು ಶ್ರೀಗಳು ಸಾಮೂಹಿಕ ವಿವಾಹ ಕಾರ್ಯಕ್ರಮದ ಮೂಲಕ ಅನೇಕ ವಿಚಾರಗಳನ್ನು ಸಮಾಜಕ್ಕೆ ನೀಡುತ್ತಿದ್ದು. ಅಂತರ್ಜಾತಿಯ ವಿವಾಹಗಳ ಮೂಲಕ ಜಾತಿ ಪದ್ದತಿಯ ನಿರ್ಮೂಲನೆಗಾಗಿ ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಿದರು. – ಆದರ್ಶ

# ಸಾಂಸ್ಕೃತಿಕ ಕಾರ್ಯಕ್ರಮಗಳ ಫಲಿತಾಂಶ

## ಜೆಎಸ್‌ಎಸ್ ಪ್ರೌಢಶಾಲಾ (ಗ್ರಾಮೀಣ) ವಿಭಾಗ

**ಜೆಎಸ್‌ಎಸ್ ಪ್ರೌಢಶಾಲಾ (ಗ್ರಾಮೀಣ) ವಿಭಾಗದಲ್ಲಿ ಹೆಚ್ಚುವರಿ ಅಂಕಗಳನ್ನು ಗಳಿಸಿದ ಸುತ್ತೂರಿನ ಪ್ರೌಢಶಾಲೆಯು 18ನೇ ಬಾರಿ ಪರ್ಯಾಯ ಪಾರಿತೋಷಕದ ಹಿರಿಮೆಯ ಗರಿ ಮುಡಿಗೇರಿಸಿಕೊಂಡಿದೆ.**



### 'ಶಾಸ್ತ್ರೀಯ ನೃತ್ಯ'

ಸ್ಪರ್ಧೆಯಲ್ಲಿ ಸುತ್ತೂರಿನ ಪ್ರೌಢಶಾಲೆಯ ವಿದ್ಯಾರ್ಥಿ ಶಾಸ್ತ್ರೀಯವಾಗಿ ನೃತ್ಯ ಮಾಡುವ ಮೂಲಕ ಪ್ರಥಮ ಬಹುಮಾನ ಪಡೆದರೆ, 2ನೇ ಬಹುಮಾನವನ್ನು ನಂಜನಗೂಡಿನ ಪ್ರೌಢಶಾಲೆಯ ವಿದ್ಯಾರ್ಥಿ ಪಡೆಯುವಲ್ಲಿ ಖುಷಿಪಟ್ಟರು. ಹುಲ್ಲಹಳ್ಳಿಯ ಪ್ರೌಢಶಾಲೆಯ (ಕನ್ನಡ ಮಾಧ್ಯಮ) ವಿದ್ಯಾರ್ಥಿ ಮೂರನೇ ಬಹುಮಾನದಲ್ಲಿ ನಿಂತರೆ. ನಾಲ್ಕನೇ ಬಹುಮಾನವನ್ನು ಹುಲ್ಲಹಳ್ಳಿಯ ಪ್ರೌಢಶಾಲೆಯ (ಆಂಗ್ಲ ಮಾಧ್ಯಮ) ವಿದ್ಯಾರ್ಥಿಗಳಿಸಿಕೊಂಡರು. ಐದನೇ ಬಹುಮಾನಕ್ಕೆ ಭಾಜನರಾದವರು ಯಳಂದೂರಿನ ಪ್ರೌಢಶಾಲೆಯ ವಿದ್ಯಾರ್ಥಿ.

### 'ಶಾಸ್ತ್ರೀಯ ಸಂಗೀತ'

ಸ್ಪರ್ಧೆಯಲ್ಲಿ ಸುತ್ತೂರಿನ ಪ್ರೌಢಶಾಲೆಯ ವಿದ್ಯಾರ್ಥಿ ಪ್ರಥಮ ಬಹುಮಾನವನ್ನು ಸುಶ್ರಾವ್ಯವಾಗಿ ಹಾಡಿ ಪಡೆಯುವಲ್ಲಿ ಯಶಸ್ವಿಯಾದರೆ, ಮನುಗನಹಳ್ಳಿ ಪ್ರೌಢಶಾಲೆಯ ವಿದ್ಯಾರ್ಥಿ 2ನೇ ಬಹುಮಾನವನ್ನು ಪಡೆದರು, ಮೂರನೇ ಬಹುಮಾನವನ್ನು ಕಾಮಗೆರೆ ಪ್ರೌಢಶಾಲೆಯ ವಿದ್ಯಾರ್ಥಿ ಪಡೆಯುವಲ್ಲಿ ಯಶಸ್ವಿಯಾದರು.

### 'ವಚನಾಧಾರಿತ ನೃತ್ಯ'

ಸ್ಪರ್ಧೆಯಲ್ಲಿ ಹುಲ್ಲಹಳ್ಳಿ ಪ್ರೌಢಶಾಲೆಯ ವಿದ್ಯಾರ್ಥಿ ಭಕ್ತಿ ಭಾವದಿಂದ ನೃತ್ಯ ಮಾಡುವ ಮೂಲಕ ಪ್ರಥಮ ಬಹುಮಾನಕ್ಕೆ ಭಾಜನರಾದರೆ, 2ನೇ ಬಹುಮಾನವನ್ನು ಹುಲ್ಲಹಳ್ಳಿ ಪ್ರೌಢಶಾಲೆಯ (ಕನ್ನಡ ಮಾಧ್ಯಮ) ವಿದ್ಯಾರ್ಥಿ ಪಡೆಯುವಲ್ಲಿ ಯಶಸ್ವಿಯಾದರು. ನಂಜನಗೂಡು ಪ್ರೌಢ ಶಾಲೆಯ ವಿದ್ಯಾರ್ಥಿ ಮೂರನೇ ಬಹುಮಾನಕ್ಕೆ ಸಮಾಧಾನಪಟ್ಟರು. ನಾಲ್ಕನೇ ಬಹುಮಾನವನ್ನು ಕೆ.ಆರ್. ನಗರ ಪ್ರೌಢಶಾಲೆಯ ವಿದ್ಯಾರ್ಥಿ ಪಡೆದರೆ, ಐದನೇ ಬಹುಮಾನವನ್ನು ಮಾಲೂರು ಪ್ರೌಢಶಾಲೆಯ ವಿದ್ಯಾರ್ಥಿ ಪಡೆದು ತೃಪ್ತಿಪಟ್ಟರು.

### 'ಸಮೂಹ ನೃತ್ಯ'

ಸ್ಪರ್ಧೆಯಲ್ಲಿ ಸುತ್ತೂರಿನ ಪ್ರೌಢಶಾಲಾ ವಿದ್ಯಾರ್ಥಿ ಕುಣಿದು ಕುಪ್ಪಳಿಸಿ ಮೊದಲನೇ ಬಹುಮಾನವನ್ನು ಪಡೆದರೆ, ಎರಡನೇ ಬಹುಮಾನವನ್ನು ಮಹದೇವನಗರದ ಪ್ರೌಢ ಶಾಲೆಯ ವಿದ್ಯಾರ್ಥಿ ಪಡೆದರು. ಮೂರನೇ ಬಹುಮಾನವನ್ನು ಹುಲ್ಲಹಳ್ಳಿ ಪ್ರೌಢಶಾಲೆ (ಕನ್ನಡ ಮಾಧ್ಯಮ) ವಿದ್ಯಾರ್ಥಿ ಬಳುಕುತ್ತಾ ಹಿಡಿದರೆ, ನಾಲ್ಕನೇ ಬಹುಮಾನವನ್ನು ಹುಲ್ಲಹಳ್ಳಿ ಪ್ರೌಢಶಾಲೆ (ಆಂಗ್ಲ ಮಾಧ್ಯಮ) ವಿದ್ಯಾರ್ಥಿ ತಾಳ್ಮೆಯಿಂದ ಸ್ವೀಕರಿಸಿದರು. ಕಲ್ಕುಣಿಕೆ ಪ್ರೌಢಶಾಲೆಯ ವಿದ್ಯಾರ್ಥಿ ಐದನೇ ಬಹುಮಾನವನ್ನು ಪಡೆದುಕೊಂಡರು.

### 'ಸಮೂಹ ಗಾಯನ'

ಸ್ಪರ್ಧೆಯಲ್ಲಿ ಸುತ್ತೂರಿನ ಪ್ರೌಢಶಾಲಾ ವಿದ್ಯಾರ್ಥಿ ಪ್ರಥಮ ಬಹುಮಾನವನ್ನು ಕಂಚಿನ ಕಂಠದಿಂದ ಹಾಡುತ್ತ ಪಡೆದರೆ, ಕಲ್ಕುಣಿಕೆ ಪ್ರೌಢಶಾಲೆಯ ವಿದ್ಯಾರ್ಥಿ ಎರಡನೇ ಬಹುಮಾನವನ್ನು ಕೋಗಿಲೆಯಂತೆ ಹಾಡಿ ಪಡೆದರು. ಮೂರನೇ ಬಹುಮಾನವನ್ನು ಅಜ್ಜೀಪುರ ಪ್ರೌಢಶಾಲೆಯ ವಿದ್ಯಾರ್ಥಿ ಸುಶ್ರಾವ್ಯವಾಗಿ ಹಾಡುವ ಮೂಲಕ ಪಡೆದರೆ, ನಾಲ್ಕನೇ ಬಹುಮಾನವನ್ನು ಪಡಗೂರು ಪ್ರೌಢಶಾಲೆಯ ವಿದ್ಯಾರ್ಥಿ ಪಡೆಯುವಲ್ಲಿ ಯಶಸ್ವಿಯಾದರು, ಐದನೇ ಬಹುಮಾನವನ್ನು ಹುಲ್ಲಹಳ್ಳಿ ಪ್ರೌಢಶಾಲೆಯ (ಆಂಗ್ಲ ಮಾಧ್ಯಮ) ವಿದ್ಯಾರ್ಥಿ ಪಡೆದು ಸಮಾಧಾನಪಟ್ಟುಕೊಂಡರು.

### 'ಸಮೂಹ ಶಾಸ್ತ್ರೀಯ ನೃತ್ಯ'

ಸ್ಪರ್ಧೆಯಲ್ಲಿ ಸುತ್ತೂರಿನ ಪ್ರೌಢಶಾಲಾ ವಿದ್ಯಾರ್ಥಿ ಪ್ರಥಮ ಬಹುಮಾನವನ್ನು ಪಡೆದು ನಲಿದರೆ, ಎರಡನೇ ಬಹುಮಾನವನ್ನು ಹುಲ್ಲಹಳ್ಳಿ ಪ್ರೌಢಶಾಲೆಯ (ಆಂಗ್ಲ ಮಾಧ್ಯಮ) ವಿದ್ಯಾರ್ಥಿ ಪಡೆದು ಕುಣಿದರು. ಹುಲ್ಲಹಳ್ಳಿ ಪ್ರೌಢಶಾಲೆಯ (ಕನ್ನಡ ಮಾಧ್ಯಮ) ವಿದ್ಯಾರ್ಥಿ 3ನೇ ಬಹುಮಾನವನ್ನು ಶಾಸ್ತ್ರೀಯವಾದ ಭಂಗಿಯಲ್ಲಿ ಪಡೆದರೆ, ನಾಲ್ಕನೇ ಬಹುಮಾನವನ್ನು ಕೆ.ಆರ್. ನಗರ ಪ್ರೌಢಶಾಲೆಯ ವಿದ್ಯಾರ್ಥಿ ಪಡೆದು ತೃಪ್ತಿಪಟ್ಟರು, ಮಾಲೂರಿನ ಪ್ರೌಢಶಾಲೆಯ ವಿದ್ಯಾರ್ಥಿ ಐದನೇ ಬಹುಮಾನವನ್ನು ಪಡೆಯುವಲ್ಲಿ ಯಶ್ವಸ್ವಿಯಾದರು.

ಛಾಯಾಚಿತ್ರಗಳು: ವಾಟಾಳ್ ಆನಂದ್, ಬಿ.ಎನ್. ನಿಜಲಿಂಗಪ್ಪ, ಜಿ.ಎಸ್. ಜಯಶಂಕರಸ್ವಾಮಿ, ಮಂಜುನಾಥ್, ಸುತ್ತೂರು ನಂಜುಂಡನಾಯಕ

# ಮಾನವನಿಗೆ ಧರ್ಮದ ಅರಿವು ಅವಶ್ಯ – ಸಿದ್ದರಾಮಯ್ಯ




ಭಜನಾಮೇಳ ಉದ್ಘಾಟಿಸಿದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು. ಚಿತ್ರದಲ್ಲಿ ಪರಮಪೂಜ್ಯರು, ಶ್ರೀ ಗುರುಪರದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ಶ್ರೀ ಕೆ.ಎಸ್. ಮಹೇಶ್, ಶ್ರೀ ಎಂ. ಸೋಮಶೇಖರ್, ಶ್ರೀ ಸಿ. ಪುಟ್ಟರಂಗಶೆಟ್ಟಿ, ಶ್ರೀ ಎಂ.ಬಿ. ಪಾಟೀಲ್, ಶ್ರೀ ಬಿ. ಹರ್ಷವರ್ಧನ್, ಡಾ. ಗೀತಾ ಮಹದೇವಪ್ರಸಾದ್ ಮೊದಲಾದವರಿದ್ದಾರೆ.

ಮಾನವನು ಪರಿಪೂರ್ಣನಾಗಲು ಧರ್ಮವನ್ನು ಅರಿಯಬೇಕು, ಯಾರಿಗೂ ಕೂಡ ಕೇಡನ್ನು ಬಯಸದೇ ಇರುವುದೇ ಧರ್ಮ ಎಂದು ಮಾಜಿ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ಹೇಳಿದರು.

ಜಾತ್ರಾ ಮಹೋತ್ಸವದ ಭಜನಾ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು ವೈಚಾರಿಕ ದೃಷ್ಟಿಕೋನದಿಂದ ಧಾರ್ಮಿಕ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ನೋಡಬೇಕು. ಪ್ರತಿ ಮಗುವೂ ಹುಟ್ಟುವಾಗ ವಿಶ್ವಮಾನವನಾಗಿ ಹುಟ್ಟುತ್ತಾನೆ ಆದರೆ ಸಾಯುವಾಗ ಅಲ್ಪ ಮಾನವನಾಗಿ ಬಿಡುತ್ತಾನೆ. ಯಾವುದೇ ಧರ್ಮ ಜಾತಿಯಲ್ಲೇ ಹುಟ್ಟಿದರು ಯಾವುದೇ ಧರ್ಮವನ್ನು ಪಾಲನೆ ಮಾಡಿದರು ನಾವೆಲ್ಲರೂ ಮಾನವರು ಎಂಬುವುದನ್ನು ಮೊದಲು ಅರಿಯುಬೇಕು. ಮಾನವನು ವೈಚಾರಿಕ ಮನೋಭಾವನೆಗಳನ್ನು ಬೆಳೆಸಿಕೊಂಡು ಮೂಢನಂಬಿಕೆಯಿಂದ ದೂರವಾಗಬೇಕು. ಇಂತಹ ಜಾತ್ರಾ ಮಹೋತ್ಸವಗಳಿಂದ ವೈಚಾರಿಕ ನೆಲಗಟ್ಟಿನಲ್ಲಿ ಬದುಕುವ ಪ್ರೇರಣೆ ದೊರೆಯುತ್ತದೆ ಎಂದರು.

ಅನೇಕ ವರ್ಷಗಳಿಂದ ಸುತ್ತೂರಿನಲ್ಲಿ ಶ್ರೀಮಠವು ನಡೆಸಿಕೊಂಡು ಬರುತ್ತಿರುವ ಜಾತ್ರಾ ಮಹೋತ್ಸವವು ಮಾನವನ ವಿಕಾಶಕ್ಕೆ ಕಾರಣವಾಗುವಂತಹ ಅನೇಕ ವಿಷಯಗಳನ್ನು ಜನರಿಗೆ ತಿಳಿಸುವ ಪ್ರಯತ್ನವನ್ನು ಮಾಡುತ್ತಿದೆ. ನಾಡಿನ ಧರ್ಮ, ಶಿಕ್ಷಣ, ಆರೋಗ್ಯ, ಮಾನವೀಯ ಮೌಲ್ಯವನ್ನು ಉಪನ್ಯಾಸಗಳು ಮತ್ತು ಭಾಷಣಗಳ ಮೂಲಕ ತಿಳಿಸಿ ಜನರು ವಿಚಾರಶೀಲರಾಗಲು ಜಾತ್ರೆ ಪ್ರೇರಣೆ ನೀಡುತ್ತಿದೆ. ಈ ಭಾರಿ ರಾಜ್ಯದ ಬೇರೆ ಬೇರೆ ಭಾಗಗಳಿಂದ ಅಲ್ಲದೆ ಹೊರ ರಾಜ್ಯದಿಂದಲ್ಲೂ ಕೂಡ ಭಜನಾ ತಂಡಗಳು ಭಜನಾ ಮೇಳಕ್ಕೆ ಆಗಮಿಸಿರುವುದು ಸಂತಸದ ವಿಚಾರವಾಗಿದ್ದು, ಈ ನಿಟ್ಟಿನಲ್ಲಿ ನಮ್ಮ ಸಂಸ್ಕೃತಿ, ಪರಂಪರೆ ಎಲ್ಲವನ್ನೂ ಸುತ್ತೂರು ಜಾತ್ರೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ತಿಳಿಸಲಾಗುತ್ತಿದೆ. ಇಲ್ಲಿ ಬೇರೆ ಬೇರೆ ಭಾಗದ ಸಂಸ್ಕೃತಿಯನ್ನು ತಿಳಿಯುವ ಅವಕಾಶವಿದ್ದು ಇದಕ್ಕೆ ಕಾರಣರಾದ ಪೂಜ್ಯ ಶ್ರೀಗಳಿಗೆ ವಂದನೆ ಸಲ್ಲಿಸುತ್ತೇನೆ. "ದಯವೇ ಧರ್ಮದ ಮೂಲವಯ್ಯ ದಯವಿಲ್ಲದ ಧರ್ಮ ಯಾವುದಯ್ಯ" ಎಂಬ ವಚನಗಳ ಮೂಲಕ ಬಸವಾದಿ ಶರಣರು ಧರ್ಮ ಎಂದರೆ ಏನು ಎಂದು ಸರಳವಾಗಿ ಹೇಳಿದ್ದಾರೆ. ಧರ್ಮ ವಿರುವುದು ಮನುಷ್ಯರಿಗಾಗಿ ಹೊರತು ಧರ್ಮಕ್ಕಾಗಿ ಮನುಷ್ಯ ಇರಬಾರದು ಎಂದು ತಿಳಿಸಿದರು.

ಹಿಂದಿನ ಕಾಲದಲ್ಲಿ ಶಿಕ್ಷಣದಿಂದ ವಂಚಿತರಾದ ಜನರಿಗೆ ವೇದ, ಉಪನಿಷತ್‌ಗಳು ಅರ್ಥವಾಗುತ್ತಿರಲಿಲ್ಲ ಆ ಕಾರಣದಿಂದ ವಚನಗಳು ಮತ್ತು ಭಜನೆಗಳ ಮೂಲಕ ಧರ್ಮದ ಬಗ್ಗೆ ಅರಿವು ಮೂಡಿಸುತ್ತಿದ್ದರು. ಅಂಬೇಡ್ಕರ್‌ರವರ ಸಂವಿಧಾನದ ಸಮಾನತೆಯನ್ನು ಬಿಂಬಿಸುವ ಶ್ರೀಮಠವು ಎಲ್ಲ ಭಕ್ತಾಧಿಗಳನ್ನು ಒಟ್ಟಿಗೆ ಸೇರಿಸಿ ಸಮಾನತೆಯನ್ನು ಎತ್ತಿಹಿಡಿಯುತ್ತಿದ್ದಾರೆ ಎಂದು ತಿಳಿಸಿದರು. – ಆದರ್ಶ

## ಧರ್ಮವೆಂದರೆ ಕೇವಲ ಪೂಜೆಯಲ್ಲ



ಭಜನಾ ಮೇಳ ಉದ್ಘಾಟನಾ ಕಾರ್ಯಕ್ರಮದ ಸಮ್ಮುಖವಹಿಸಿದ್ದ ಮೈಸೂರು ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್‌ರವರು ಶುಭ ಸಂದೇಶ ನೀಡಿದರು. ಸುತ್ತೂರು ಶ್ರೀಕ್ಷೇತ್ರ ಪವಿತ್ರವಾದದ್ದು, ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಶ್ರೀಮಠವನ್ನು ಆದಿಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳು ಸಂಸ್ಥಾಪಿಸಿದರು. ಶಿವರಾತ್ರಿ ಶಿವಯೋಗಿಗಳವರ ತಪಃಶಕ್ತಿಯಿಂದ ಶ್ರೀಮಠವು ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಧರ್ಮದ ಜೊತೆಗೆ ಶಿಕ್ಷಣ, ವಸತಿಯನ್ನು ಸರ್ವರಿಗೂ ನೀಡಿದೆ. ಧರ್ಮವೆಂದರೆ ಕೇವಲ ಪೂಜೆಯಲ್ಲ ಪ್ರತಿಯೊಬ್ಬರನ್ನು ಪ್ರೀತಿ, ವಿಶ್ವಾಸದಿಂದ ಕಂಡು ದೇವರನ್ನು ಮಾನವನಲ್ಲಿ ಕಾಣುವಂತಾಗಬೇಕೆಂದರು. ಸುತ್ತೂರು ಶ್ರೀಗಳು ಎಲ್ಲಾ ಕ್ಷೇತ್ರದ ಜನರನ್ನು ಜಾತ್ರೆಗೆ ಕರೆಸಿ ಮನೋವಿಕಾಸಕ್ಕೆ ಬೇಕಾದ ಮಾರ್ಗದರ್ಶನಗಳನ್ನು ಕೊಡಿಸುತ್ತಾರೆ. ಅಲ್ಲದೆ ರೈತರಿಗೆ ಬೇಕಾದ ಕೃಷಿಮೇಳ, ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ತಿಳುವಳಿಕೆಗಳನ್ನು ನೀಡುತ್ತಾರೆ.

ದೇಶದ ಸಂಸ್ಕೃತಿ, ಭಾಷೆ, ನೆಲ, ಜಲದ ಬಗೆಗಿನ ಪ್ರೀತಿ ಗೌರವಗಳು ಎಲ್ಲರಲ್ಲೂ ಉಂಟಾಗಲು ಇಂತಹ ಜಾತ್ರಾ ಮಹೋತ್ಸವಗಳು ಸಹಕಾರಿಯಾಗುತ್ತವೆ. ಶ್ರೀಮಠದ ಕಾರ್ಯಗಳು ಬಹಳ ಮಹತ್ವದ್ದಾಗಿವೆ. ಆದುದರಿಂದ ಪೂಜ್ಯಶ್ರೀಗಳಿಗೆ ಎಲ್ಲರೂ ಋಣಿಯಾಗಿರಬೇಕು ಎಂದು ನುಡಿದರು.



ಜನಪದ ಸಂಗೀತ ಸವಿ ಉಣಬಡಿಸುತ್ತಿರುವ ಶ್ರೀ ದೊಡ್ಡಗವಿ ಬಸಪ್ಪ ಮತ್ತು ತಂಡದ ಕಲಾವಿದರು

Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore-570 015